₹ 5/-

# ನೇಸರು

## ಮೈಸೂರು ಅಸೋಸಿಯೇಷನ್ ಮುಂಬೈ

Nesaru Tingalole Vol XXXIV - 11 November 2016

PAGES 16







ನವರಾತ್ರಿ ಪ್ರಯುಕ್ತ ನಡೆದ ರಂಗೋಲಿ ಸ್ಪರ್ಧೆಯ ವಿಜೇತರು.

**The Mysore Association, Bombay**
393, Bhau Daji Road, Matunga, Mumbai - 400 019.
Tel.: 2402 4647, 2403 7065 • Fax : 2401 0574
Email : mysoreassociation.mumbai@gmail.com

## ಅಸೋಸಿಯೇಷನ್‌ನ ಸದಸ್ಯರು ಇತ್ತೀಚೆಗೆ ಕಲ್ಯಾಣ್‌ನ ವಾಟರ್‌ಪಾರ್ಕ್‌ಗೆ ವಿಹಾರ ಕೂಟಕ್ಕೆ ಹೋದ ಸಂದರ್ಭ





ರವಿವಾರ, 16–10–2016 ರಂದು ಮೈಸೂರು ಅಸೋಸಿಯೇಶನ್ ತಂಡ ಮುಂಬೈನ ವಿರಾರ್ ಸಮೀಪದ ಕಲ್ಯಾಣಿ ವಾಟರ್ ರಿಸೋರ್ಟ್‌ಗೆ ಒಂದು ದಿನದ ವಿಹಾರಕ್ಕಾಗಿ ತೆರಳಿತ್ತು. 48 ಜನರನ್ನು ತುಂಬಿಕೊಂಡು ಬೆಳಗ್ಗೆ 8.00 ಹೊರಟ ಬಸ್ಸು 9.30ಕ್ಕೆ ರಿಸೋರ್ಟ್ ತಲುಪಿತು. ಅಲ್ಲೇ ಬೆಳಗಿನ ಉಪಹಾರ, ಮಧ್ಯಾನ್ಹದ ಊಟ ಮತ್ತು ಸಂಜೆಯ ಕಾಫಿ ಚಹಾದ ವ್ಯವಸ್ಥೆ ಮಾಡಲಾಗಿತ್ತು. ಅನೇಕ ಬಗೆಯ ನೀರಿನ ಕೊಳದಲ್ಲಿ ವಿಹಾರಕ್ಕೆ ಹೋದ ಸದಸ್ಯರು ಮೈ ತಣಿಯೆ ಆಟ ಆಡಿ ದಣಿದರು, ಮತ್ತೆ ಅದೆಂತಹದ್ದೋ ಹಗ್ಗದ ಮೇಲೆ ಸವಾರಿ ಹೋದರು (ರೋಪ್ ಗ್ಲೈಡಿಂಗ್ ಮಾಡಿದರು), ಉತ್ಸಾಹ ತಗ್ಗದೆ ಹೌಸಿ ಆಡಿದರು, ಅಂತಾಕ್ಷರಿ ಆಡಿದರು. ಸ್ವಾಮಿ ನಿತ್ಯಾನಂದರ ಆಶ್ರಮವನ್ನು ಸಂದರ್ಶಿಸಿ, ವಜ್ರೇಶ್ವರಿಯ ದೇವಿಯರಿಗೆ ಪ್ರಣಾಮ ಸಲ್ಲಿಸಿ ಹಿಂತಿರುಗುವಾಗ ರಾತ್ರಿ 8.00 ದಾಟಿತ್ತು. ಅಂತೂ ವಿಹಾರ ಆನಂದದಾಯಕ ವಾಗಿತ್ತು.

ಗೌ. ಸಂಪಾದಕರು :

**ಡಾ. ಜ್ಯೋತಿ ಸತೀಶ್**

❖ ❖❖

ಸಂಪಾದಕ ಮಂಡಳಿ:

**ಡಾ. ಮಂಜುನಾಥ್**

**ಕೆ. ಮಂಜುನಾಥಯ್ಯ**

**ನಾರಾಯಣ ನವಿಲೇಕರ್**

**ಗಣಪತಿ ಶಂಕರಲಿಂಗ**

**ನೀಲಕಂಠ ಮೇಡರ್**

❖ ❖❖

ಬೆಂಗಳೂರು ಪ್ರತಿನಿಧಿ :

**ಎಂ.ಎ.ಎನ್. ಪ್ರಸಾದ್**

❖ ❖❖

ನೇಸರುವಿನಲ್ಲಿ ಪ್ರಕಟವಾಗುವ ಬರಹಗಳಿಗೆ ಆಯಾ ಲೇಖಕರೇ ಜವಾಬ್ದಾರರು. ಅಲ್ಲಿ ಮೂಡಿ ಬಂದ ಅಭಿಪ್ರಾಯಗಳಿಗೆ ಸಂಸ್ಥೆಯು ಜವಾಬ್ದಾರಿಯಲ್ಲ. *- ಸಂ*

The views expressed by the contributors in this journal are theirs and not of the Association and the Association is not in anyway responsible for the same.

*- Ed.*

❖ ❖❖

ಸಂಪರ್ಕ ವಿಳಾಸ :

**ನೇಸರು**

ಮೈಸೂರು ಅಸೋಸಿಯೇಷನ್
393, ಭಾವು ದಾಜಿ ರಸ್ತೆ,
ಮಾಟುಂಗ,
ಮುಂಬಯಿ-400 019.
✆ 24024647 / 2403 7065
Fax : 2401 0574
Email :
mysoreassociation.mumbai@gmail.com
Website :
www.mysoreassociation.in

*ಸಂಪಾದಕೀಯ*

# ನೇಸರು

## ತಿಂಗಳೋಲೆ

**ಸಂಪುಟ 34** **ನವೆಂಬರ್ 2016** **ಸಂಚಿಕೆ 11**

ನಮ್ಮ ನಾಡು ಹಲವು ಧರ್ಮಗಳ ಗೂಡು. ಪ್ರತಿಯೊಂದು ಸಮುದಾಯವೂ ಬೇರೆ ಬೇರೆ ರೀತಿಯ ಆಚಾರ ವಿಚಾರವನ್ನು ಅನುಸರಿಸಿಕೊಂಡು ಬರುತ್ತಿದೆ. ನಮ್ಮಲ್ಲಿ ಅನೇಕ ಹಬ್ಬ ಹರಿದಿನಗಳನ್ನು ಆಚರಿಸಲಾಗುತ್ತದೆ. ಎಲ್ಲ ಸಮುದಾಯವು ತಮ್ಮ ತಮ್ಮ ಹಬ್ಬಗಳನ್ನು ಬಹಳಷ್ಟು ಸಂಭ್ರಮ, ವಿಜೃಂಭಣೆಯಿಂದ ಆಚರಿಸುತ್ತಾರೆ. ಈ ಹಬ್ಬಹರಿದಿನಗಳು ಒಂದು ರೀತಿಯಲ್ಲಿ ಒಗ್ಗಟ್ಟಿನ, ನೆಮ್ಮದಿಯ ಸಂಕೇತವಾದರೆ, ಇನ್ನೊಂದು ರೀತಿಯಲ್ಲಿ ನಮ್ಮ ಸಂಸ್ಕೃತಿಯ, ಪರಂಪರೆಯ ಪ್ರತಿಬಿಂಬವೂ ಹೌದು.

ಹಬ್ಬ ಹರಿದಿನಗಳು ಹತ್ತಿರ ಬರುತ್ತಿದ್ದಂತೆ ನಮಗೇ ತಿಳಿಯದ, ಒಂದು ರೀತಿಯ ಉತ್ಸಾಹ, ಹುಮ್ಮಸ್ಸು ನಮ್ಮಲ್ಲಿ ಹರಿದಾಡುತ್ತದೆ. ಒಂದಾದ ಮೇಲೆ ಒಂದು ಹಬ್ಬಗಳ ಸರದಿ ಬರುತ್ತಿರುತ್ತದೆ. ಒಂದು ಹಬ್ಬ ಮುಗಿದರೆ, ಇನ್ನೊಂದು ಹಬ್ಬದ ಆಗಮನವನ್ನು ನಿರೀಕ್ಷಿಸುತ್ತೇವೆ. ಆ ನಿರೀಕ್ಷಣೆಯಲ್ಲಿ ದಿನಗಳು ಕಳೆದದ್ದು ಗೊತ್ತಾಗುವುದೇ ಇಲ್ಲ.

ಈ ಹಬ್ಬ ಹರಿದಿನಗಳು ಮನುಷ್ಯರ ನಡುವಿನ ಬಾಂಧವ್ಯವನ್ನು ಹೆಚ್ಚಿಸುತ್ತದೆ. ಈ ಹಬ್ಬ ಹರಿದಿನಗಳು ಮಾನವೀಯ ನೆಲೆಯಲ್ಲಿಯೇ ವೈವಿಧ್ಯತೆಯಲ್ಲಿ ಐಕ್ಯತೆಯನ್ನು ಸಾರುತ್ತವೆ. ಈ ಹಬ್ಬ ಹರಿದಿನಗಳು ಮಾನವನಲ್ಲಿ ಅಲೌಕಿಕ ದೈವೀ ಶಕ್ತಿಯನ್ನು ಹುಟ್ಟಿಸುತ್ತದೆ. ಹಬ್ಬಗಳೆಂದರೆ ಕೇವಲ ವಿಶೇಷ ಭೋಜನ ಮಾತ್ರವಲ್ಲ. ಇದೊಂದು ಸಾಂಸ್ಕೃತಿಕ ಚಟುಚಟಿಕೆ ಯಾಗಿರುವುದರ ಜೊತೆಗೆ ಧಾರ್ಮಿಕ ಮೌಲ್ಯತೆಯುಳ್ಳದ್ದು ಆಗಿರುತ್ತದೆ ಎನ್ನುವುದನ್ನು ಮರೆಯುವಂತಿಲ್ಲ. ಪ್ರತಿ ಹಬ್ಬವನ್ನು ಒಬ್ಬೊಬ್ಬ ದೇವರಿಗೆ ಅದನ್ನು ಮೀಸಲಾಗಿರುಸುತ್ತೇವೆ. ಭಕ್ತಿಯಿಂದ, ಶ್ರದ್ಧೆಯಿಂದ ದೇವರನ್ನು ಬೇಡಿಕೊಳ್ಳುತ್ತೇವೆ. ಹಬ್ಬದ ದಿನ ನಾವು ಮಾಡಿದ್ದೆಲ್ಲವನ್ನು ದೇವರಿಗೆ ನೈವೇದ್ಯದ ರೂಪದಲ್ಲಿ ಅರ್ಪಿಸುತ್ತೇವೆ. ಅರ್ಪಣೆಯಲ್ಲಿ ಪರಿಶುದ್ಧವಾದ ಭಕ್ತಿಯಿದ್ದರೆ ಮಾತ್ರ ಅದು ದೇವರಿಗೆ ಸಲ್ಲುತ್ತದೆ.

ಒಮ್ಮೆ ಒಬ್ಬ ಬಡ ರೈತ ಶಿವರಾತ್ರಿಯ ಸಮಯದಲ್ಲಿ ದೇವರಿಗೆ ಅರ್ಪಿಸಲೆಂದು ತನ್ನ ಹಿತ್ತಲಲ್ಲಿ ಬೆಳೆದ ಒಣಗಿ ಹೋಗಿದ್ದ ಶಂಖಪುಷ್ಪಗಳನ್ನು ಶಿವ ದೇವಸ್ಥಾನಕ್ಕೆ ತರುತ್ತಾನೆ. ಅವನಲ್ಲಿ ಏನೂ ಉಳಿದಿಲ್ಲ. ಮಳೆ ಇಲ್ಲದೆ ಬೆಳೆದ ಬೆಳೆಯೂ ನಾಶವಾಗಿ ಮನೆಮಂದಿಯೆಲ್ಲ ಉಪವಾಸದಲ್ಲಿ ದಿನಕಳೆಯುತ್ತಿದ್ದ ದಿನಗಳವು. ಎಲ್ಲರೂ ವಿವಿಧ ಬಗೆಯ ಭಕ್ಷ್ಯಗಳನ್ನು ಕೊಂಡೊಯ್ಯುವಾಗ, ರೈತ ತನ್ನ ಮನೆಯ ಹಿತ್ತಲಲ್ಲಿದ್ದ ಒಣಗಿ ಹೋಗುತ್ತಿರುವ ಶಂಖಪುಷ್ಪಗಳನ್ನು ತೆಗೆದುಕೊಂಡು ಹೋಗುತ್ತಾನೆ. ದೇವಸ್ಥಾನದ ಪೂಜಾರಿ ಆ ಒಣಗಿ ಹೋಗಿದ್ದ ಶಂಖಪುಷ್ಪಗಳನ್ನು ದೇವರಿಗೆ ಅರ್ಪಿಸಲು ಬಿಡುವುದಿಲ್ಲ. ಇದರಿಂದ ವ್ಯಥೆಗೊಂಡ ಆ ಬಡ ರೈತ ದೇವಸ್ಥಾನದ ಬಾಗಿಲಲ್ಲಿ ನಿಂತು, ಶಿವನನ್ನು ಭಕ್ತಿಯಿಂದ ನೆನೆಯುತ್ತಾನೆ. ನನ್ನಲ್ಲಿ ನಿನಗೆ ಕೊಡಲಿಕ್ಕೆ ಏನೂ ಇಲ್ಲ. ಮನೆಯಲ್ಲಿ ಊಟಕ್ಕೆ ಗತಿಯಿಲ್ಲದಿದ್ದರಿಂದ ಎಲ್ಲರೂ ಉಪವಾಸದಲ್ಲಿರುವರು. ನನಗೆ ನಿನ್ನಲ್ಲಿರುವ ಈ ಭಕ್ತಿ ಸತ್ಯವಾಗಿದ್ದರೆ ಈ ಶಂಖಪುಷ್ಪಗಳನ್ನು ಅರ್ಪಿಸಿಕೋ ಎಂದು ಕಣ್ಣೀರು ಸುರಿಸುತ್ತಾ ಬೇಡಿಕೊಳ್ಳುತ್ತಾನಂತೆ. ಆಗ ಅದೆಲ್ಲಿಂದಲೋ ರಭಸದಿಂದ ಬಂದ ಗಾಳಿ, ರೈತನ ಕೈಯಲ್ಲಿದ್ದ ಶಂಖಪುಷ್ಪಗಳನ್ನು ಹಾರಿಸಿಕೊಂಡು ಹೋಯಿತಂತೆ. ಕೊನೆಗೆ ಅದು ಹೋಗಿ ಸೇರಿದ್ದು ಶಿವಲಿಂಗದ ಮೇಲೆ. ಯಾವುದನ್ನು ಅರ್ಪಿಸಕೂಡದು ಎಂದಿದ್ದ ಒಣ ಹೂವು ಶಿವಲಿಂಗದ ಮೇಲೆ ಕುಳಿತದ್ದನ್ನು ಕಂಡು ಪೂಜಾರಿ ಆಶ್ಚರ್ಯಚಕಿತನಾದ ಜೊತೆಗೆ ತನ್ನ ಅಜ್ಞಾನಕ್ಕೆ ನಾಚಿಕೆಪಟ್ಟುಕೊಂಡನಂತೆ.

ಕೊನೆಗೆ ಆ ಬಡ ರೈತನನ್ನು ಒಳ ಕರೆದು ನೀನೇ ನಿನ್ನ ಕೈಯಾರೆ ಈ ಹೂವುಗಳನ್ನು ದೇವರ ಮುಡಿಗೇರಿಸು ಎಂದು ಬೇಡಿಕೊಂಡನಂತೆ.

ಹೀಗೆ ನಮ್ಮಲ್ಲಿ ಶ್ರದ್ಧೆಯಿದ್ದರೆ ನಾವು ಏನನ್ನೂ ಅರ್ಪಿಸಿದರೂ ಅದು ದೇವರಿಗೆ ಸಲ್ಲುತ್ತದೆ. ಶಿವರಾಮ ಕಾರಂತರು ಒಂದೆಡೆ ಹೇಳುತ್ತಾರೆ, "ನಾವು ದೇವರಲ್ಲಿ ಬುದ್ಧಿ ಕೊಡು ಎಂದು ಕೇಳುತ್ತೇವೆ. ಆದರೆ ದೇವರು ಸೃಷ್ಟಿಮಾಡುವಾಗ ಬುದ್ಧಿ ಕೊಡದೆ ಹುಟ್ಟಿಸುತ್ತಾನೆಯೇ?" ಎಂದು ಪ್ರಶ್ನೆ ಮಾಡುವುದನ್ನು ಗಮನಿಸಬಹುದು. ಹೌದು.. ನಾವು ಒಮ್ಮೊಮ್ಮೆ ದೇವರಲ್ಲಿ ಏನೇನೆಲ್ಲ ಬೇಡಿಕೊಳ್ಳುತ್ತೇವೆ. ದೇವರು ಸೃಷ್ಟಿ ಮಾಡುವಾಗ ಯಾರ್‍ಯಾರಿಗೆ ಏನೇನು ಕೊಡಬೇಕೊ ಅಷ್ಟಷ್ಟನ್ನು ಕೊಟ್ಟೇ ಸೃಷ್ಟಿಸುತ್ತಾನೆ. ದೇವರು ಕೊಟ್ಟಿದ್ದನ್ನೆ ನಾವು ಅವನಿಗೆ ಲಂಚದ ರೂಪದಲ್ಲಿ ಅರ್ಪಿಸುತ್ತೇವೆ. ನಿನಗೆ ಅದು ಕೊಡುತ್ತೇನೆ, ಇದು ಕೊಡುತ್ತೇನೆ ಎಂದೆಲ್ಲ ಹರಕೆ ಕಟ್ಟಿಕೊಳ್ಳುತ್ತೇವೆ. ಒಮ್ಮೊಮ್ಮೆ ಅನಿಸುತ್ತದೆ ನಮ್ಮ ಬುದ್ಧಿ ಎಷ್ಟೊಂದು ಬಾಲಿಶವಾದುದು ಎಂದು. ಒಟ್ಟಿನಲ್ಲಿ ದೇವರಿಗೆ ಬೇಕಾಗಿರೋದು ಪರಿಶುದ್ಧವಾದ ಭಕ್ತಿ. ಅರ್ಪಣೆಯಲ್ಲೂ ದೇವರು ಬಯಸುವುದು ಪರಿಪೂರ್ಣತೆಯನ್ನು ಮಾತ್ರ..

**– ಡಾ. ಜ್ಯೋತಿ ಸತೀಶ್**

# ಬದುಕಿನಿಂದ ಒಂದಿಷ್ಟು ದೂರ

ಮಂಡೆಹಾಳೆ ತಲೆಗೆ ಕವಚಿಕೊಂಡು ನಸುಕಿನ ಚುಮುಚುಮು ಚಳಿಯಲ್ಲಿ ಸರ್ವೇಶ್ರೀ ಒಡೆಯರ ಮನೆಯ ಬಿಟ್ಟಿ ಕೆಲಸಕ್ಕಾಗಿ ಮನೆಯಿಂದ ಹೊರ ಬೀಳುವ ಸಮಯ ಉಬ್ಬಿನಲ್ಲಿ ಅಗಳು ದಾಟಿ ತಮ್ಮ ಮನೆಯತ್ತಲೇ ಬರುತ್ತಿರುವ ಬಸೀರ ಪಠೇಲ ಕಂಡು ಬಂದ. ಎರಡೂ ಕಿವಿ ಮುಚ್ಚಿಕೊಳ್ಳುವಂತೆ ತಲೆಗೆ ಮಫ್ಲರ್ ಸುತ್ತಿಕೊಂಡು ಕಾಲೆಳೆದುಕೊಳ್ಳುತ್ತಾ ತಾನು ಬರುತ್ತಿರುವ ಮುನ್ಸೂಚನೆಯೆಂಬಂತೆ ಫರ್ಲಾಂಗು ದೂರದಿಂದಲೆ ಗಟ್ಟಿಯಾಗಿ ಕೆಮ್ಮುತ್ತಾ ಆಗಮಿಸುವ ಬಸೀರ ಪಠೇಲನ ಪರಿಚಯ ಸರ್ವೇಶ್ರಿಗೇನೂ ಹೊಸದಲ್ಲ. ಯಜಮಾನರು ಆತ್ಮಹತ್ಯೆ ಮಾಡಿಕೊಂಡು ತನ್ನನ್ನೂ ತನ್ನ ಮೂವರು ಮಕ್ಕಳನ್ನೂ ಅನಾಥರನ್ನಾಗಿ ಬಿಟ್ಟು ಹೋದ ಆ ಸಂದರ್ಭದಲ್ಲಿ ದೇವರಂತೆ ಬಂದು ಸಹಾಯ ಮಾಡಿದ ಈ ಬಸೀರ ಪಠೇಲನ ಸಹವಾಸ ಬಿಸಿತುಪ್ಪ ಬಾಯಿಗೆ ಹಾಕಿಕೊಂಡಂತೆ ಅಂತ ಸರ್ವೇಶ್ರಿಗೆ ಗೊತ್ತಾದದ್ದು ಮೊನ್ನೆ ಮೊನ್ನೆ. ಬಸೀರಪಠೇಲ ಒಳ್ಳೆಯವನಲ್ಲ. ಅವನೊಬ್ಬ ನೀಚ. ಅವನ ಸಹವಾಸ ದೇವರಿಗೂ ಬೇಡ ಅಂತ ಅವರಿವರ ಬಾಯಿಯಿಂದ ಸರ್ವೇಶ್ರಿ ಕೇಳಿದ್ದರೂ ಏಕೋ ಏನೋ ಅವಳಿಗೆ ಅವನ ವಿಷಯದಲ್ಲಿ ಒಂದು ರೀತಿಯ ಸದಭಿಪ್ರಾಯವಿತ್ತು. ಆದರೆ ಮೊನ್ನೆಯ ಘಟನೆಯ ನಂತರ ಮಾತ್ರ ಯಾರಾದರೂ ಅವನ ಹೆಸರು ಎತ್ತಿದರೂ ಸಾಕು. ಸರ್ವೇಶ್ರಿ ಕೆಂಡ ಕಾರಲಿಕ್ಕೆ ಪ್ರಾರಂಭಿಸಿದ್ದಾಳೆ. ಕೆಂಡ ಕಾರದೆ ಇನ್ನೇನು ಮಾಡಿಯಾಳು? ತನ್ನ ಹಿರಿ ಮಗ ಜನಾರ್ಧನ ಸತ್ತು ಹೋಗಲು ಇವನೇ ಕಾರಣ ಎನ್ನುವುದು ಈಗ ಅವಳಿಗೂ ಗೊತ್ತಾಗಿ ಬಿಟ್ಟಿದೆ.

ಜನಾರ್ಧನ ತೀರಿ ಹೋಗಿ ಈಗಾಗಲೇ ವರ್ಷ ಕಳೆದಿದೆ. ಅವನನ್ನು ಬೂದಿ ಮಾಡುವ ದಿನ ಬಸೀರ ಪಠೇಲ ಬಂದಿದ್ದ. ಆಮೇಲೆ ಮತ್ತೆ ಈ ಕಡೆ ಮುಖ ಹಾಕಿದವನಲ್ಲ. ಈಗ ಆಕಸ್ಮಿಕವಾಗಿ ನಸುಕಿನಲ್ಲೇ ಬರಬೇಕಾದರೆ ಏನೋ ಬಲವಾದ ಕಾರಣ ಇರಬೇಕು. ಯಾರನ್ನೋ ಬಾವಿಗೆ ತಳ್ಳಿ ಆಳ ನೋಡುವ ಯೋಚನೆ ಇರಬೇಕು. ಯಾರನ್ನೋ ಏನು ಬಂತು? ನೋಡಿದರೆ ನನ್ನ ಮನೆ ಬಾಗಿಲಿಗೇ ಬರುತ್ತಿರುವ ಹಾಗೆ ಕಾಣುತ್ತಿದೆ. ಹೇಗೂ ನನ್ನ ಹಿರಿಮಗನನ್ನು ನುಂಗಿ ಆಗಿದೆಯಲ್ಲಾ? ಉಳಿದ ಇವನೊಬ್ಬನನ್ನು ಏಕೆ ಬಿಡಬೇಕು. ಅವನಿಗೂ ಈಗ ಮೀಸೆ ಚಿಗುರಲು ಪ್ರಾರಂಭವಾಗಿದೆ ಅಂತೆಲ್ಲಾ ಲೆಕ್ಕ ಹಾಕಿಕೊಂಡಿರಬೇಕು. ಬರಲಿ ಮತ್ತೆಂದೂ ಈ ಕಡೆ ತಲೆ ಹಾಕದಂತೆ ಈಸಲ ಸರಿಯಾಗಿಯೇ ಛೀಮಾರಿ ಹಾಕಿ ಕಳುಹಿಸಿದರಾಯಿತು.

ಯೋಚಿಸುತ್ತಿದ್ದಂತೆಯೇ ಸರ್ವೇಶ್ರಿಗೆ ಹಿಂದಿನ ಘಟನೆಗಳು ಒಂದೊಂದಾಗಿ ನೆನಪಾಗತೊಡಗಿದವು. ಮನಸ್ಸಿನಷ್ಟು ವೇಗವಾಗಿ ಓಡುವುದು ಇನ್ನೊಂದಿಲ್ಲವಂತೆ. ಸರ್ವೇಶ್ರಿಯೊಂದಿಗೆ ಹಾಗೆಯೇ ಆಯಿತು.

ಘಟ್ಟದ ಮೇಲೆ ಸೇರೆಗಾರಿಕೆ ಮಾಡಿಕೊಂಡಿದ್ದ ನನ್ನವರು ಹದಿಹರೆಯದ ಹುಡುಗಿಯೊಬ್ಬಳು ಆತ್ಮಹತ್ಯೆ ಮಾಡಿಕೊಳ್ಳಲಿಕ್ಕೆ ಕಾರಣರಾದರು ಎಂಬ ಆಪಾದನೆಯೊಂದಿಗೆ ಹಿಂತಿರುಗಿ ಬಂದು ಊರು ಸೇರಿಕೊಳ್ಳುವ ತನಕ ನನಗೆ ಯಾವುದಕ್ಕೆ ಕಡಿಮೆ ಇತ್ತು? ಉಡಲು ಉಣ್ಣಲಿಕ್ಕಂತೂ ಎಂದೂ ಕೊರತೆಯಾದದ್ದಿಲ್ಲ. ಪಾಪಪ್ರಜ್ಞೆ ಅರಿವಿಗೆ ಬಂದೋ ಅಥವಾ ವಿನಾಕಾರಣ ಬಂದ ಅಪವಾದ ಸಹಿಸಿಕೊಳ್ಳಲಿಕ್ಕಾಗದೆಯೋ ಅಂತೂ ಹೆಂಡತಿಯಾದ ನನ್ನ ಹತ್ತಿರವೂ ಒಂದು ಮಾತು ಹೇಳದೆ ಬಂದ ವಾರದೊಳಗೇನೇ ಅವರು ವಿಷ ಕುಡಿದು ಆತ್ಮಹತ್ಯೆ ಮಾಡಿಕೊಂಡದ್ದು ಈಗ ಬರೀ ಒಂದು ನೆನಪಾಗಿ ಉಳಿದಿದೆ ಅಷ್ಟೆ. ತಾನು ಸಾಯುವಾಗ ತಮ್ಮವರನ್ನೂ ಒಟ್ಟಿಗೆ ಸೆಳೆದುಕೊಂಡು ಹೋಗಬೇಕು ಅಂತ ಅವರು ಹಾಕಿದ ಪ್ಲಾನು ಮಾತ್ರ ಯಶಸ್ವಿಯಾಗಲಿಲ್ಲ.

ಆ ದಿನ ಸುಮಾರಾಗಿ ಕತ್ತಲಾಗಿತ್ತು. ಓಲಾಡುತ್ತಲೇ ಮನೆಗೆ ಬಂದವರು, 'ಕಳ್ಳು ತಂದಿದ್ದೇನೆ ಕುಡಿದು ಮಲಗಿ' ಅಂತ ಹೇಳಿದವರು ತಾವು ಇನ್ನಿಷ್ಟು ಸುರಿದುಕೊಂಡು ನಮಗಂತ ಎರಡು ಬಾಟ್ಲಿ ಪ್ರತ್ಯೇಕ ತೆಗೆದಿರಿಸಿ ಹಾಸಿಗೆ ಹಿಡಿದು ಮಲಗಿದವರು ಮತ್ತೆ ಹಾಸಿಗೆಯಿಂದ ಎದ್ದಿರಲಿಲ್ಲ. ಅದೇ ರಾತ್ರಿ ಶೇಷನ ಮನೆಗೆ ಸರ್ಪ ನುಗ್ಗಿ ಗಲಾಟೆಯಾಗಿಲ್ಲದಿದ್ದರೆ ನಾವು ಅವರನ್ನು ಬೆಳಗಿನ ತನಕ ಎಬ್ಬಿಸಲಿಕ್ಕೂ ಹೋಗುತ್ತಿರಲಿಲ್ಲ. ಕಳ್ಳಿನಲ್ಲಿ ವಿಷ ಬೆರೆತಿದೆ ಎನ್ನುವುದು ನಮಗೆ ಗೊತ್ತಾಗುತ್ತಲೂ ಇರಲಿಲ್ಲ. ಮಾತ್ರವಲ್ಲ, ಒಂದಲ್ಲ ಐದು ಹೆಣ ಆ ಹೊತ್ತು ನಮ್ಮ ಮನೆಯಲ್ಲಿ ಬೀಳುತ್ತಿತ್ತು. ಬಹುಶಃ ದೇವರಿಗೆ ಸರಿಕಾಣಲಿಲ್ಲ ಅಂತ ಕಾಣುತ್ತೆ. ಅವರೊಬ್ಬರೇ ನಮ್ಮನ್ನಗಲಿ ನಡೆದುಬಿಟ್ಟರು. ಕಳ್ಳಿನಲ್ಲಿ ವಿಷ ಬೆರೆತದ್ದರಿಂದ ಅವರು ಸಾವನ್ನಪ್ಪಿದ್ದು ನಿಜವಾದರೂ ಅವರಾಗಿಯೇ ಕಳ್ಳಿನಲ್ಲಿ ವಿಷ ಬೆರೆಸಿದ್ದರೋ ಆಕಸ್ಮಿಕವೋ ಅಥವಾ ಎರಡನೆಯವರ ಕೈವಾಡವಿತ್ತೋ ಎನ್ನುವುದು ಕೊನೆಗೂ ನಿಗೂಢವಾಗಿಯೇ ಉಳಿಯಿತು.

ಅವರು ತೀರಿಕೊಂಡಾಗ ರೆಪ್ಪೆಗೆ ರೆಪ್ಪೆ ತಾಗಿಸದಂತೆ ಕಳೆದ ಮೊದಲೊಂದು ವಾರ ಒಂದ್ಯೆವತ್ತು ಬಾರಿಯಾದರೂ ನಾನು ಕೂಡಾ ಆತ್ಮಹತ್ಯೆಯ ನಿರ್ಧಾರ ತೆಗೆದುಕೊಂಡಿರಬೇಕು. ಅಂತಹ ಸಂದರ್ಭದಲ್ಲಿ ಸ್ವಲ್ಪವಾದರೂ ಧೈರ್ಯಕೊಟ್ಟು ಬದುಕುಳಿಯುವ ದಾರಿ ತೋರಿಸುವುದಾಗಿ ಭರವಸೆ ಕೊಟ್ಟವನೆಂದರೆ ಇದೇ ಬಸೀರ ಪಠೇಲ. ಆ ನಿಟ್ಟಿನಲ್ಲಿ ಯೋಚಿಸುವಾಗ ನಾನು ಬಸೀರನಿಗೆ ಚಿರಋಣಿ. ಊರಿನವರು ಆತನ ಬಗ್ಗೆ ಏನೇ ಹೇಳಲಿ. ಊರಿನವರಿಗಿಂತ ಇವನು ಎಷ್ಟಕ್ಕೂ ಆಗಬೇಕು.

ಬಸೀರ ಪಠೇಲ ಒಬ್ಬನಲ್ಲದಿದ್ದರೆ ನಾವು ಇಷ್ಟು ಹೊತ್ತಿಗೆ ಬೀದಿ ಭಿಕಾರಿಗಳಾಗ'ಬೇಕಾಗುತ್ತಿತ್ತೋ ಏನೋ? ಒಡೆಯರ ಮನೆಗೆ ನಾನು ಬಿಟ್ಟಿ ಕೆಲಸಕ್ಕೆ ಹೋಗುವುದನ್ನು ನಿಲ್ಲಿಸಿದಲ್ಲಿ ನಮಗೆ ಮನೆ ಖಾಲಿ ಮಾಡಿ ಬೇರೆಲ್ಲಿಗಾದರೂ ಹೋಗಬೇಕಾಗುತ್ತಿತ್ತು. ದಿನದ ಹತ್ತು ಹನ್ನೆರಡು ತಾಸು ಅವರ ಮನೆಯಂಗಳದಲ್ಲಿ ಸುರಿಸುವ ಬೆವರಿನ ರೂಪದಲ್ಲಿ ಅವರು ಮನೆ ಬಾಡಿಗೆ ವಸೂಲಿ ಮಾಡುತ್ತಿದ್ದರು.

**ಜಿ.ವಿ. ಕಂಚುಗಾರ**

ಮಗ ಜನಾರ್ಧನ ಕೂಡಾ ಒಡೆಯರ ಮನೆ ಕೆಲಸಕ್ಕೆ ಹೋಗುತ್ತಿದ್ದನಾದರೂ ಅವನಿಗೆ ಸಿಗುತ್ತಿದ್ದುದು ದಿನಕ್ಕೆ ಎರಡು ಸೇರು ಅಕ್ಕಿ, ಐವತ್ತು ರೂಪಾಯಿ. ಅದರೊಂದಿಗೆ ಬೆಳಗಿನ ಖಾಲಿ ಕಾಫಿ ಹಾಗೂ ಮಧ್ಯಾಹ್ನದ ಊಟ. ಘಟ್ಟದ ಮೇಲಿಂದ ಅವರು ಆಗಾಗ ಅಷ್ಟಿಷ್ಟು ಕಳುಹಿಸುತ್ತಿದ್ದುದರಿಂದ ಯಾವುದಕ್ಕೂ ಕುಂದು ಕೊರತೆಯಾಗದೆ ನಮ್ಮ ಜೀವನವೇನೋ ನೆಮ್ಮದಿಯಾಗಿಯೇ ನಡೆಯುತ್ತಿತ್ತು. ಅವರು ತೀರಿಕೊಂಡದ್ದೇ ಮೂಲ. ನಮ್ಮ ಆರ್ಥಿಕ ಪರಿಸ್ಥಿತಿ ಬಹಳಷ್ಟು ಹದಗೆಟ್ಟು ಸುವಾಸಿನಿ ಹಾಗೂ ಧನಂಜಯರ ಓದಿಗೂ ಇತಿಶ್ರೀ ಹಾಡಬೇಕಾಯಿತು.

ಎಷ್ಟಾದರೂ ಮನುಷ್ಯನಿಗೆ ಆಸೆ ಎನ್ನುವುದು ಹೆಚ್ಚಲ್ಲವೇ? ಮುಲ್ಲಿಗದ್ದೆ ಶಂಕರ ಇದೇ ಬಸೀರ ಪಠೇಲನೊಟ್ಟಿಗೆ ಮುಂಬಯಿಗೆ ಹೋಗಿ ಎರಡೇ ವರ್ಷದಲ್ಲಿ ಇಪ್ಪತ್ತು ಸಾವಿರ ಒಟ್ಟು ಮಾಡಿಕೊಂಡು ಬಂದು ಊರಿನಲ್ಲಿ ಒಂದು ಕಿರಾಣಿ ಅಂಗಡಿ ಹಾಕಿಕೊಂಡು ಒಂದು ಸ್ಥಿತಿಗೆ ಬಂದದ್ದನ್ನು ನೋಡಿದ ಜನಾರ್ಧನನಿಗೆ ತಾನು ಒಡೆಯರ ಮನೆಯಲ್ಲಿ ಈ ರೀತಿ ಕೊಳೆಯುತ್ತಾ ಬಿದ್ದಿರುವುದು ಸರಿಯಲ್ಲ ಅನ್ನಿಸಿರಬೇಕು. ಒಂದು ದಿನ ಬಸೀರ ಪಠೇಲನನ್ನು ನೋಡಿ ಮಾತನಾಡಿಯೂ ಬಂದ. ಜನಾರ್ಧನ ದೇಹದಲ್ಲಿ ಗಟ್ಟಿ ಮುಟ್ಟಾಗಿದ್ದುದರಿಂದ ಬಸೀರ ಪಠೇಲನಿಗೆ ಇವನ ಮೇಲೆ ಮೊದಲೇ ಒಂದು ಕಣ್ಣು ಇತ್ತು. ಈಗಂತೂ ಇನ್ನೂ ಸಲೀಸಾಯಿತು. ಜನಾರ್ಧನನನ್ನು ಮುಂಬಯಿಗೆ ಕರೆದುಕೊಂಡು ಹೋಗುವುದಂತ ಗಟ್ಟಿಯಾಯಿತು. ದಿನಗೂಲಿಯಾದರೆ ದಿನಗೂಲಿ, ದಿನಕ್ಕೆ ನೂರಿನ್ನೂರು ರೂಪಾಯಿ ಎಂದರೆ ಯಾರು ಬೇಡ ಅಂದಾರು?

ಆದರೆ ಜನಾರ್ಧನನ ಅದೃಷ್ಟ ಮಾತ್ರ ಚೆನ್ನಾಗಿರಲಿಲ್ಲ. ಹೋಗಿ ವರ್ಷ ಕಳೆಯುವುದರೊಳಗೆ ಊರಿಗೆ ಹಿಂತಿರುಗುವಂತಾಯಿತು. ಮೊದ ಮೊದಲು ತಿನ್ನಲಿಕ್ಕೆ ಕಷ್ಟಪಡುತ್ತಿದ್ದವ ಕೊನೆ ಕೊನೆಗೆ ನೀರು ಕುಡಿಯಲಿಕ್ಕೂ ಒದ್ದಾಡತೊಡಗಿದ. ಏನೋ

ಕಾಯಿಲೆ ಇರಬೇಕು ಅಂತ ಸ್ಪೆಷಲಿಸ್ಟ್ ಡಾಕ್ಟರರಿಗೆ ತೋರಿಸಲಾಗಿ ಅವರು ಟಾಟಾ ಕ್ಯಾನ್ಸರ್ ಆಸ್ಪತ್ರೆಯಲ್ಲಿ ಚೆಕ್‌ಅಪ್ ಮಾಡಿಕೊಳ್ಳುವುದು ಒಳ್ಳೆಯದು ಅಂತ ಗೈಡೆನ್ಸ್ ಮಾಡಿದರು. ಜನಾರ್ಧನನಿಗೆ ಗಂಟಲು ಕ್ಯಾನ್ಸರ್ ಅನ್ನುವುದು ಪತ್ತೆಯಾಗಿ ದೇಹಕ್ಕೆ ಶಕ್ತಿ ಬರಲಿ ಅಂತ ಕೊಟ್ಟ ಆರು ಬಾಟಲಿ ರಕ್ತ ಹಾಗೂ ಶಾಕ್ ಟ್ರೀಟ್‌ಮೆಂಟ್ ಎಲ್ಲಾ ವ್ಯರ್ಥವಾದವು. ಇವನಿನ್ನು ಬದುಕುವುದಿಲ್ಲ ಅಂತ ಗಟ್ಟಿಯಾದಾಗಲೇ ನೀನೊಮ್ಮೆ ಊರಿಗೆ ಹೋಗಿ ಬಾ ಎಲ್ಲಾ ಸರಿಯಾಗುತ್ತದೆ ಅಂತ. ಬಸೀರ ಪಠೇಲ ಭರವಸೆಯ ಮಾತನ್ನಾಡಿ ಜನಾರ್ಧನನನ್ನು ಊರಿಗೆ  ಕಳುಹಿಸಿಕೊಟ್ಟದ್ದು.

ಗಾವುಟಿ ವೈದ್ಯರೊಬ್ಬರು ಜನಾರ್ಧನನಿಗೆ ಔಷಧ ಮಾಡಲು ಮುಂದೆ ಬಂದರೂ ಅವರ ದುಬಾರಿ ಬೆಲೆಯ ಔಷಧಿ ಕೊಂಡುಕೊಳ್ಳುವಷ್ಟು ತಾಕತ್ತು ಸರ್ವೇಶ್ರಿಯಲ್ಲಿರಲಿಲ್ಲ. ಊರಿಗೆ ಬಂದ ತಿಂಗಳೊಳಗೇನೇ ಜನಾರ್ಧನ ಅಸುನೀಗಿದ.

ಜನಾರ್ಧನನ ಅಕಾಲ ಮರಣದಿಂದ ತತ್ತರಿಸಿ ಹೋದ ಸರ್ವೇಶ್ರಿಗೆ ಅಂತಹ ವಿಷಮ ಪರಿಸ್ಥಿತಿಯಲ್ಲೂ ನಾಲ್ಕು ಸಾಂತ್ವನದ ಮಾತಾಡಿದ್ದೆಂದರೆ ಬಸೀರ ಪಠೇಲ. ಒಬ್ಬಳೇ ಸಂಕೋಚ ಪಟ್ಟುಕೊಳ್ಳಬೇಡ. ಏನಾದರೂ ಅಗತ್ಯವಿದ್ದಲ್ಲಿ ಹಿಂಜರಿಯದೇ ಕೇಳು- ನನ್ನ ಮನೆ ಬಾಗಿಲು ನಿನಗೆ ಸದಾ ತೆರೆದಿದೆ ಅಂತ ಸರ್ವೆಶ್ರಿಯ ಮೈದಡವಿ ಬಸೀರ ಪಠೇಲ ಅಲ್ಲಿಂದ ಕಾಲು ಕಿತ್ತಾಗ ಯಾರೂ ಏನೊಂದೂ ಚಕಾರವೆತ್ತದಿದ್ದರೂ ಒಬ್ಬೊಬ್ಬರು ಒಂದೊಂದು ರೀತಿಯಾಗಿ ಕಲ್ಪಿಸಿಕೊಂಡಿದ್ದಾರೆ ಅಂತ ಅವರ ಮುಖಭಾವದಿಂದ ಎಂತವರಿಗೂ ಅರ್ಥವಾಗುತ್ತಿತ್ತು.

ಮುಂಬಯಿಯಲ್ಲಿ ಏನೋ ಏಜೆನ್ಸಿ ತೆಗೆದುಕೊಂಡು ಊರಿನ ಕಡೆಯ ಹುಡುಗರು ಮಕ್ಕಳನ್ನೆಲ್ಲಾ ಲೇಬರ್ ಆಗಿ ಸಾಗಹಾಕಿ ಸಾಕಷ್ಟು ಹಣ ಮಾಡಿಕೊಂಡಿದ್ದಾನೆ ಬಸೀರ ಪಠೇಲ  ಅನ್ನುವುದು ಸರ್ವೇಶ್ರಿಯನ್ನೂ ಸೇರಿಸಿ ಈಗೀಗ ಎಲ್ಲರಿಗೂ ಗೊತ್ತಾಗಿಬಿಟ್ಟಿದೆ. ಅವನೊಟ್ಟಿಗೆ ಮುಂಬಯಿಗೆ ಹೋದ ಕೆಲವರು ಅಷ್ಟಿಷ್ಟು ದುಡ್ಡು ಮಾಡಿಕೊಂಡು ಕೆಲವೇ ವರ್ಷಗಳಲ್ಲಿ ಊರಿಗೆ ಹಿಂತಿರುಗಿ ಬಂದು ಏನೇನೋ ಎಲ್ಲಾ ಬಿಸಿನೆಸ್ಸಿಗೆ ಕೈ ಹಾಕಿ ಮುಂದೆ ಬಂದಿದ್ದಾರೆ. ಮತ್ತೆ ಕೆಲವರು ಜೀವಂತವಾಗಿ ಇದ್ದಾರೋ ಇಲ್ಲವೋ ಅಂತ ಸಂಶಯ ಪಡುವಷ್ಟು ಊರಿನ ಸಂಬಂಧ ಕಡಿದುಕೊಂಡಿದ್ದಾರೆ. ಉಳಿದವರು ಸ್ಮಗ್ಲಿಂಗ್, ಗುಂಡಾಗಿರಿ, ಯೂನಿಯನ್ ಮಣ್ಣು ಮಸಣ ಅಂತ ಸಾಮಾನ್ಯ ಜೀವನದಿಂದ ದೂರಸಾಗಿ ಕೋರ್ಟು ಕಚೇರಿ, ಮನೆ ಜೈಲು ಅಂತ ಅಲೆಯಕ್ಕೆ ಪ್ರಾರಂಭಿಸಿದ್ದಾರೆ.....

ಅಂಗಳಕ್ಕೆ ಬಂದು ಚಪ್ಪಲಿ ಕಳಚುತ್ತಾ 'ಸರ್ವೇಶ್ರಿ' ಅಂತ ಬಸೀರ ಪಠೇಲ ಗಟ್ಟಿಯಾಗಿ ಕರೆದಾಗಲೇ ಅವಳು ತನ್ನ ಕಲ್ಪನಾ ಲೋಕದಿಂದ ವಾಸ್ತವಕ್ಕೆ ಬಂದದ್ದು. ತನ್ನನ್ನು ಎವೆಯಿಕ್ಕದೇ ನೋಡುತ್ತಿದ್ದ ಬಸೀರ ಪಠೇಲನ ಕಣ್ಣಲ್ಲಿ ಕಣ್ಣಿಟ್ಟು ಸರ್ವೇಶ್ರಿ, ಅವನನ್ನು ದಿಟ್ಟಿಸಿ ನೋಡಿದಳು. ಎರಡು ನಿಮಿಷ ಯಾರ ಬಾಯಿಯಿಂದಲೂ ಮಾತು ಹೊರಡಲಿಲ್ಲ. ಬದಲಾಗಿ ಬಸೀರ ಪಠೇಲ ಕಣ್ಣಿನಿಂದ ಕಣ್ಣೀರು ಹರಿಯಲು ಪ್ರಾರಂಭವಾಗಿ,

'ಸರ್ವೇಶ್ರಿ, ನನ್ನನ್ನು ಕ್ಷಮಿಸಮ್ಮ. ನಾನು ಪಾಪಿ. ನಿನ್ನಂತಹ ಮುಗ್ಧಳಿಗೆ ದ್ರೋಹ ಬಗೆದ ನನಗೆ ದೇವರೇ ಸರಿಯಾದ ಶಿಕ್ಷೆ ವಿಧಿಸಿದ್ದಾರೆ. ಅಂತ ಗೋಳೋ ಎಂದು ಅಳಲಿಕ್ಕೆ ಪ್ರಾರಂಭಿಸಿ ಸರ್ವೇಶ್ರಿಯ ಕಾಲ ಬುಡಕ್ಕೆ ಬಂದು ಕುಸಿದು ಬಿದ್ದ.

ಸರ್ವೇಶ್ರಿಗೆ ತಲೆ ಬುಡ ಒಂದೂ ಅರ್ಥವಾಗಲಿಲ್ಲ. ಒಂದು ಹೆಜ್ಜೆ ಹಿಂದೆ ಸರಿಯುತ್ತಾ ಸಂಶಯ ದೃಷ್ಟಿಯಿಂದ ಅವನನ್ನೇ ನೋಡತೊಡಗಿದಳು. ಅವಳ ಇಂಗಿತವನ್ನರಿತ ಬಸೀರ ಪಠೇಲ ನಿಧಾನವಾಗಿ ಎದ್ದು ಏರುಜಗುಲಿಯ ಮೇಲಿದ್ದ ಏಕೈಕ ಮುರುಕು ಕುರ್ಚಿಯ ಮೇಲೆ ಕುಳಿತುಕೊಳ್ಳುತ್ತಾ ಪುನಃ ಮಾತಿಗಾರಂಭಿಸಿದ.

ಸರ್ವೇಶ್ರಿ, ನೀನು ನನ್ನನ್ನು ಎಷ್ಟರ ಮಟ್ಟಿಗೆ ಅರ್ಥಮಾಡಿಕೊಂಡಿದ್ದಿಯೋ ಗೊತ್ತಿಲ್ಲ. ನಾನು ಕೂಡಾ ನಿನ್ನನ್ನು ತಿಳಿದುಕೊಂಡದ್ದು ಬಹಳ ತಡವಾಗಿ. ನಿನ್ನಂತಹ ಸಾಧ್ವಿಗೆ ಈ ಪರಿಸ್ಥಿತಿ ಬರಬಾರದಿತ್ತು. ಬಂತು. ಅದಕ್ಕೆ ಬಹುಪಾಲು ನಾನೂ ಕಾರಣನಾಗಿದ್ದೇನೆ. ನಿನ್ನ ಹಿರಿ ಮಗ ಜನಾರ್ಧನ ಸತ್ತದ್ದು ನನ್ನಿಂದಾಗಿ. ನನ್ನ ಮಗ ಯೂಸುಫ್ ಪಠೇಲ ಮುಂಬಯಿಯಲ್ಲಿ ಒಂದು ಏಜೆನ್ಸಿ ನಡೆಸುತ್ತಿದ್ದು ದೊಡ್ಡ ದೊಡ್ಡ ಕಂಪೆನಿಗಳಿಗೆ ದಿನಗೂಲಿಗಳು ಬೇಕಾದಲ್ಲಿ ಡೈಲಿ ವೇಜಸಿನ ಮೇಲೆ ಕಮಿಷನ್ ಬೇಸಿಸನಲ್ಲಿ ಸಪ್ಲೈ ಮಾಡುತ್ತಿದ್ದ. ಅವನಿಗೆ ಬೇಕಾಗುವ ಕೂಲಿಯಾಳುಗಳನ್ನು ಊರುಕೇರಿಗಳಿಂದ ತರಿಸಿ ಹೊಂದಿಸುವ ಕಾರ್ಯ ನಾನು ನೋಡಿಕೊಳ್ಳುತ್ತಿದ್ದೆ. ನಾನೂ ನನ್ನ ಮಗನೂ ಒಟ್ಟಾಗಿ ನಿನ್ನ ಮಗ ಜನಾರ್ಧನನನ್ನು ಕೆಲಸಕ್ಕೆ ಸೇರಿಸಿದ್ದು Automic Research Centre ನಲ್ಲಿ; ಡೈಲಿ ವೇಜಸನ ಮೇಲೆ ಅದೂ ಹೆಲ್ಪರ್ ಆಗಿ. ಅಲ್ಲೇ ನಿನ್ನ ಮಗ ಅಣುವಿಕಿರಣದ ದುಷ್ಪರಿಣಾಮಕ್ಕೊಳಗಾಗಿ ಕ್ಯಾನ್ಸರ್‌ಗೆ ತುತ್ತಾದದ್ದು. ಈಗ ನನ್ನ ಮಗನಿಗೂ ಅದೇ ಕಾಯಿಲೆ ಹಿಡಿದುಕೊಂಡಿದೆ.

ಸಾವು ಬದುಕಿನ ಅಂಚಿನಲ್ಲಿ ಸೆಣಸಾಡುತ್ತಾ ಹಾಸಿಗೆ ಹಿಡಿದು ತಿಂಗಳು ಕಳೆಯಿತು. ನನಗೆ ಇರುವುದು ಒಬ್ಬನೇ ಮಗ. ಮಗಳು ಮಗ ಎಲ್ಲಾ ಅವನೇ. ಅವನೇ ನನ್ನ ಸರ್ವಸ್ವ. ಯುರೇನಿಯಂ ಅದುರು ತೆಗೆಯುವ ಮೈನಿಗೂ Automic centreಗೂ ದಿನಗೂಲಿಗಳನ್ನು ಸೇರಿಸಲು ಆಗಾಗ ಸಂದರ್ಶಿಸುತ್ತಿದ್ದುದೇ ಅವನಿಗೆ ಮೂಲವಾಯಿತು. ಕ್ಯಾನ್ಸರ್ ಹಿಡಿದುಕೊಂಡಿತು. ಕಾಯಿಲೆ ಹಿಡಿದು ವರ್ಷವೇ ಕಳೆದು ಹೋಗಿದೆಯಂತೆ. ಗೊತ್ತಾದದ್ದು ತಿಂಗಳ ಹಿಂದೆ. ವಿಷಾನಿಲ ಸೋರುವುದು, ವಿಕಿರಣಗೊಳ್ಳುವುದು ದೇಹದ ಮೇಲೆ ಯಾವ ರೀತಿ ತೀವ್ರತರ ಪರಿಣಾಮ ಬೀರುತ್ತವೆ ಅಂತ ತಿಳಿದೂ ತಿಳಿದೂ ಯಾರ ಯಾರದ್ದೋ ಮಕ್ಕಳನ್ನೆಲ್ಲಾ ಬಲಿಕೊಟ್ಟದ್ದಕ್ಕೆ ತಕ್ಕ ಪ್ರಾಯಶ್ಚಿತ್ತ ಅನುಭವಿಸಬೇಕಾದ ದುರ್ಭಾಗ್ಯ ನನ್ನದಾಯಿತು. ತಾರಾಪುರ ಅಣುಶಕ್ತಿ ಕೇಂದ್ರದಲ್ಲಿ ರೇಡಿಯೋ ವಿಕಿರಣಕ್ಕೆ ತುತ್ತಾಗುತ್ತಿರುವ ಕಾರ್ಮಿಕರ ಸಂಖ್ಯೆ ವರ್ಷ ವರ್ಷ ಏರುತ್ತಿರುವುದಾಗಲೀ ಭೋಪಾಳದ ಯೂನಿಯನ್ ಕಾರ್ಬೈಡ್‌ನಲ್ಲಿ ವಿಷಾನಿಲ ಸೋರುವಿಕೆಯಿಂದ ಸತ್ತವರ ಹಾಗೂ ಬದುಕಿಯೂ ಸತ್ತಂತಿರುವವರ ನರಕಯಾತನೆಯಾಗಲಿ ಇನ್ನೂ ಸರಕಾರದ ಕಣ್ಣು ತೆರೆಯಿಸದಿದ್ದುದು ನಮ್ಮ ದುರದೃಷ್ಟವಲ್ಲದೆ ಮತ್ತೇನು? ಇಂತಹ ಕಂಪನಿಗಳಲ್ಲಿ ನೌಕರರಿಗೆ ಸಿಗಬೇಕಾದ ಸಹಾಯ ಸೌಲತ್ತುಗಳು, ವೇತನ ಭತ್ತೆಗಳು ಸರಿಯಾಗಿ ಸಿಗದೆ ಅವರು ಪಡುವ ಪಾಡು ಹೇಳಿ ಪೂರೈಸುವುದಲ್ಲ. ವಿಷಾನಿಲ ಸೋರುವಿಕೆ, ವಿಕಿರಣಗಳ ಮೇಲೆ ಯೋಗ್ಯ ಹತೋಟಿ ತಾರದೆ ಯಾರೂ ಕೆಲಸ ಮಾಡುವುದು ತರವಲ್ಲ ಎನ್ನುವುದು ನಿಜವಾದರೂ ಹೊಟ್ಟೆ ಪಾಡಿಗಾಗಿ ದಿನೇ ದಿನೇ ಡೈಲಿ ವೇಜಸನ ಮೇಲೆ ಕೂಲಿಯಾಳುಗಳು ಬಂದು ಸೇರುತ್ತಿರುವುದು ಏರುತ್ತಲೇ ಹೋಗುತ್ತಿದೆ. ಕಣ್ಣಿನಲ್ಲಿ ರಕ್ತವಿಲ್ಲದ ನನ್ನಂತಹ ಕೆಲವರು; ಕೂಲಿಯಾಳುಗಳು ಹಾಗೂ ಕಂಪೆನಿಗಳ ನಡುವೆ ದಲ್ಲಾಳಿಗಳಂತೆ ಕೆಲಸ ಮಾಡಿ ತಮ್ಮ ಬೇಳೆ ಬೇಯಿಸಿಕೊಳ್ಳುವುದು ನಿಜಕ್ಕೂ ನಾಚಿಕೆಗೇಡು. ಅಂತಾರಾಷ್ಟ್ರೀಯ ಯುವ ವರ್ಷಕ್ಕೆ ಇದೇ ನಾವು ಕೊಟ್ಟ ಕೊಡುಗೆ. ಮಾನವೀಯತೆಗೇ ನಾವೆಸಗಿದ ಬಹುದೊಡ್ಡ ಅಪಚಾರ. ಛೀ; ನಮ್ಮ ಬದುಕಿಗೆ ಧಿಕ್ಕಾರ. ನಾನು ನನ್ನ ಮಗನೂ ಸೇರಿ ಈ ರೀತಿಯಾಗಿ ಬಹಳಷ್ಟು ಹಣ ಸಂಪಾದಿಸಿದ್ದೇವೆ. ಆದರೇನು ಬಂತು. ಈಗ ಅದೆಲ್ಲಾ ವ್ಯರ್ಥವಾಗಿ ಕಾಣುತ್ತಿದೆ. ಸರ್ವೇಶ್ರಿ, ಇಷ್ಟು ದಿನ ನನ್ನಲ್ಲಿ ಏನನ್ನೂ ಸಾಧಿಸಬಲ್ಲೆ ಎಂಬ ಒಂದು ರೀತಿಯ ಛಲ ಇತ್ತು. ಈಗ ಅದೆಲ್ಲಾ ನುಚ್ಚು ನೂರಾಗಿ ಹೋಗಿದೆ. ನನಗೆ ನನ್ನ ಮೇಲೇ ವಿಶ್ವಾಸ ಉಳಿದಿಲ್ಲ. ನನ್ನ ಪಾಪದ ಕೊಡ ತುಂಬಿದ ಹಾಗೆ ಕಾಣುತ್ತಿದೆ. ಆದರೂ ಒಂದೇ ಒಂದು ಆಶಾಕಿರಣದಿಂದ ನಿನ್ನ ಬಳಿ ಬಂದಿದ್ದೇನೆ. ನಿನ್ನಲ್ಲಿ ಅದ್ಯಾವುದೋ ಒಂದು ದೈವೀ ಶಕ್ತಿಯನ್ನು ನಾನು ಕಂಡುಕೊಂಡಿದ್ದೇನೆ. ನಿನ್ನ ಗಂಡ ಮುಕುಂದ ನಾಯ್ಕರು ಸತ್ತಾಗಾಗಲಿ ಹಿರಿಮಗ ಜನಾರ್ಧನ ಸತ್ತಾಗಾಗಲಿ ನೀನು ಏನೊಂದೂ ವಿಚಲಿತಳಾಗದೆ ಅಧಮ್ಯಧೈರ್ಯ ಸಾಹಸಗಳಿಂದ ಪರಿಸ್ಥಿತಿಯನ್ನು ಎದುರಿಸಿದ್ದು ನನಗಿನ್ನೂ ಸರಿಯಾಗಿ ನೆನಪಿದೆ. ದೊಡ್ಡ ಮನಸ್ಸು ಮಾಡಿ ನೀನು ನನ್ನನ್ನು ನನ್ನ ಮಗನನ್ನೂ

ಕ್ಷಮಿಸಿದಿಯಂತಾದರೆ ನನ್ನ ಮಗ ಬದುಕುಳಿಯುತ್ತಾನೆ ಎಂಬ ಭರವಸೆ ನನಗಿದೆ. ನನ್ನ ಅಂತರಾತ್ಮ ಹಾಗೆ ಕೂಗಿಕೊಳ್ಳುತ್ತಿದೆ. ಕೈ ಜೋಡಿಸಿ ಬೇಡಿಕೊಳ್ಳುತ್ತಿದ್ದೇನೆ. ನನ್ನ ಮಗ ಯೂಸುಫ ಪಠೇಲ ನಿನ್ನ ಮಗ ಜನಾರ್ಧನ ಅಂತಲೇ ತಿಳಿದು ಅವನನ್ನೊಮ್ಮೆ ಕ್ಷಮಿಸಿಬಿಡು ತಾಯಿ. ಇದಕ್ಕಿಂತ ಹೆಚ್ಚಿಗೆ ಇನ್ನೇನೂ ಹೇಳಲಾರೆ.

ಇಷ್ಟು ಮಾತು ಹೇಳಿ ಬಸೀರ ಪಠೇಲ ನಿಧಾನವಾಗಿ ಕಣ್ಣೆತ್ತಿ ನೋಡಿದ. ಸರ್ವೇಶ್ರಿಯ ಕಣ್ಣುಗಳು ತೇವವಾಗುತ್ತಿರುವುದನ್ನು ಕಂಡವ ಇನ್ನು ಹೆಚ್ಚು ಹೊತ್ತು ಅಲ್ಲಿ ನಿಲ್ಲಬಯಸದೆ, 'ಸರ್ವೇಶ್ರಿ, ನಾನಿನ್ನು ಬರ್ತೀನಮ್ಮ' ಅನ್ನುತ್ತಾ ಅಲ್ಲಿಂದ ಕಾಲ್ಕಿತ್ತ.

ಕಣ್ಣೀರು ಹತೋಟಿ ತಪ್ಪಿ ಹರಿಯತೊಡಗಿದರೂ ಬಸೀರಪಠೇಲ ಹೊರಡಲನುವಾದುದನ್ನು ಮನಗಂಡ ಸರ್ವೇಶ್ರಿ, ಅವನನ್ನು ತಡೆದು ನಿಲ್ಲಿಸಿ ಎರಡು ಮಾತನ್ನಾಡಲು ಮರೆಯಲಿಲ್ಲ. ಜನಾರ್ಧನ ಸಾಯುವ ಕೆಲವು ಕ್ಷಣ ಮೊದಲು ಕಾರ್ಮಿಕರ ಸಮಸ್ಯೆಗಳ ಬಗ್ಗೆ ತನ್ನ ಅಳಲನ್ನು ತೋಡಿಕೊಂಡದ್ದು ಅವಳಿಗೆ ಒಂದೊಂದಾಗಿ ನೆನಪಾಗತೊಡಗಿತ್ತು.

ಬಸೀರ, ನನಗೆ ನಿನ್ನ ಮೇಲೆ ಎಳ್ಳಷ್ಟೂ ದ್ವೇಷವಿಲ್ಲ. ನಿನ್ನ ಉಪಕಾರವೇ ಬಹಳಷ್ಟಿರುವಾಗ ನಿನ್ನನ್ನು ದ್ವೇಷಿಸುವ ಮಾತೇ ಬರುವುದಿಲ್ಲ. ನನ್ನ ಮಗನಿಗೆ ಕ್ಯಾನ್ಸರ್ ಹಿಡಿಯಲು ನೀನೇ ಕಾರಣ ಎನ್ನುವುದು ಒಂದು ರೀತಿಯಲ್ಲಿ ನಿಜವಾದರೂ ನಿನ್ನಿಂದಾಗಿ ಮುಂದೆ ಬಂದ ಬಹಳಷ್ಟು ಯುವಕರನ್ನು ನಾನು ನಿತ್ಯ ನೋಡುತ್ತಿಲ್ಲವೇ? ಮುಖ್ಯವಾಗಿ ನನ್ನ ಹಣೆ ಬರಹ ಸರಿ ಇರಲಿಲ್ಲ. ಅದಕ್ಕೆ ನಿನ್ನನ್ನು ದೂರಿ ಪ್ರಯೋಜನವೇನು? ಆದರೂ ನನ್ನಿಂದಾಗಿಯೇ ಇಷ್ಟೆಲ್ಲಾ ಆಯಿತು ಅಂತ ನೀನು ಪಶ್ಚಾತ್ತಾಪ ಪಡುತ್ತಿರುವಿಯಲ್ಲಾ? ಪಶ್ಚಾತ್ತಾಪಕ್ಕಿಂತ ಮಿಗಿಲಾದ ಪ್ರಾಯಶ್ಚಿತ್ತ ಇನ್ನೊಂದಿಲ್ಲ ಅಂತ ಹಿರಿಯರು ಹೇಳುವುದನ್ನು ನೀನು ಕೇಳಿಲ್ಲವೇ? ಆದರೂ ಅದಕ್ಕೂ ಮಿಗಿಲಾಗಿ ನೀನು ಮಾಡಬೇಕಾದ ಕಾರ್ಯ ಇನ್ನೊಂದಿದೆ. ನನ್ನ ಮಗನನ್ನು ತಳ್ಳಿದಂತೆ ನೀನು ಇನ್ನು ಯಾರು ಯಾರನ್ನೆಲ್ಲಾ ಈ ರೀತಿಯ ನರಕದ ಗುಂಡಿಗೆ ದೂಡಿರುವಿಯೋ ಯಾರಿಗೆ ಗೊತ್ತು? ಅವರನ್ನೆಲ್ಲಾ ಸಂದರ್ಶಿಸಿ ಅವರ ಕ್ಷೇಮ ಸಮಾಚಾರ ವಿಚಾರಿಸಿಕೊಳ್ಳಬೇಕಾದ ಮಹತ್ಕಾರ್ಯ ಈಗ ನಿನ್ನಿಂದಾಗಬೇಕಿದೆ. ಕಾರ್ಮಿಕರ ಏಳಿಗೆಗಾಗಿ ಅವರ ಉನ್ನತಿಗಾಗಿ ನೀನು ನಿನ್ನನ್ನೇ ಸಮರ್ಪಿಸಿಕೊಂಡು ಹೋರಾಡಬೇಕಾದ ಕಾಲ ಬಂದಿದೆ. ದೇವರು ನಿನಗೆ ಆ ರೀತಿಯ ಬುದ್ಧಿಯನ್ನಿತ್ತು ಸನ್ಮಾರ್ಗದಲ್ಲಿ ಸಾಗಿಸಲಿ ಅಂತ ಪ್ರಾರ್ಥಿಸಿಕೊಳ್ಳುತ್ತಾ ತುಂಬು ಹೃದಯದಿಂದ ನಿಮ್ಮಿಬ್ಬರನ್ನೂ ಕ್ಷಮಿಸುತ್ತಿದ್ದೇನೆ. ನಿನ್ನ ನಂಬಿಕೆಯ ಮೇಲೆ ನಿನಗೆ ಭರವಸೆಯಿದ್ದ ಮೇಲೆ ನಾನು ಎರಡು ಮಾತು ಹೇಳುವಂತಿಲ್ಲ. ಹೋಗಿ ಬಾ. ಮುಂದಿನ ಸಲ ಬರುವಾಗ ಮಗನನ್ನೂ ಕೂಡಿಕೊಂಡು ಬಾ.

ಸರ್ವೇಶ್ರಿಯ ನಿಷ್ಕಳಂಕ ಮನಸ್ಸಿನ ಬಿರುಮಾತುಗಳಿಂದ ಭಾವೋದ್ವೇಗಕ್ಕೊಳಗಾದ ಬಸೀರ ಪಠೇಲ ನಿಧಾನವಾಗಿ ತನ್ನ ಕಾಲುಗಳಿಗೆ ಚಲನೆಯಿತ್ತ.

ಬಸೀರ ಪಠೇಲ ಹೋದ ಕಡೆಯೇ ನೋಡುತ್ತಿದ್ದ ಸರ್ವೇಶ್ರಿ ಅವನು ಅಗಳು ದಾಟಿ ಉಬ್ಬು ಹತ್ತಿ ಕಣ್ಮರೆಯಾಗುವ ತನಕವೂ ದೃಷ್ಟಿ ಬದಲಿಸಲಿಲ್ಲ. ಅವನ ಬಗ್ಗೆ ನಾನು ಎಷ್ಟೊಂದು ತಪ್ಪು ಕಲ್ಪನೆ ಮಾಡಿಕೊಂಡಿದ್ದೆ ಅಂತ ಮನಸ್ಸಿನಲ್ಲೇ ಮೆಲುಕು ಹಾಕತೊಡಗಿದಂತೆ ಅವಳಿಗರಿವಿಲ್ಲದಂತೆ ಎರಡು ಹನಿ ಕಣ್ಣೀರು ಕೆಳಗುದುರಿದವು.

ತಾನು ನಂಬಿದ ಆನೆಗುಡ್ಡೆ ಗಣಪತಿ ಹೆಸರಿನಲ್ಲಿ ಒಂದು ಕಾಲು ರೂಪಾಯಿ ತೆಗೆದಿರಿಸಿ ಮಂಡೆ ಹಾಳೆ ಸರಿಪಡಿಸಿಕೊಳ್ಳುತ್ತಾ ಒಡೆಯರ ಮನೆಯತ್ತ ಸಾಗಿದವಳು, 'ನಾಳೆಗೆ ಸಂಕ್ರಾಂತಿ. ಆನೆಗುಡ್ಡೆಗೆ ಹೋಗಿ ಯುಸೂಫ ಪಠೇಲನ ಹೆಸರಿನಲ್ಲಿ ಹಣ್ಣುಕಾಯಿ ಮಾಡಿಕೊಂಡು ಬರಬೇಕು. ಇವತ್ತು ಕೆಲಸಕ್ಕೆ ಹೋದವಳು ನಾಳೆ ಬರಲಿಕ್ಕಾಗುವುದಿಲ್ಲ. ಅಂತ ಒಡೆಯರ ಮನೆಯಲ್ಲಿ ಹೇಳಿ ಬಂದರಾಯಿತು' ಅಂತ ಮನಸ್ಸಿನಲ್ಲೇ ಲೆಕ್ಕ ಹಾಕುತ್ತಾ ಈಗಾಗಲೇ ಬಹಳಷ್ಟು ತಡವಾಗಿರುವುದನ್ನು ಅರಿತು ನಡಿಗೆಯ ವೇಗ ಹೆಚ್ಚಿಸಿದಳು.

●

# ಗುರುತು

ನಿನ್ನ ನಿರುಳಿನಲಿ
ಕನ್ನಡಿಯೆದುರು ನಿಂತೊಂದು
ಪ್ರಶ್ನೆ ಕೇಳಿದೆ ನಾನು
'ನಾನು ಯಾರು?'
ವಿಸ್ಮಯದ ಗಂಭೀರ ಮುಸುಕು
ಹೊತ್ತಂಥ ಬಿಂಬ
ಮೌನದಲಿ ಕಣ್ಣು ಪಿಳುಕಿಸುತ
ವಿವಶವಾಯಿತು ಮುದ್ರೆ
ಮತ್ತೆ ಕೇಳಿದೆ ನಾನು ಬಿಡಲಿಲ್ಲ
ಬಲು ಗಟ್ಟಿಯಾಗಿ
'ಯಾರೋ ನಾನು, ಯಾರು?'
ತುಟಿ ಬಿರಿದು ನಕ್ಕಿತೊಮ್ಮೆ ಬಿಂಬ
ಉತ್ತರಿಸಲಿಲ್ಲ ತುಸುವೂ
ತತ್ತರಿಸಲಿಲ್ಲ
ಮತ್ತೂ ಛಲದಿಂದ ಕೇಳಿದೆ
'ನಾನು ಹೋಗಲಿ ಬಿಡು, ನೀನು ಯಾರು?'
ಇದ್ದಕ್ಕಿದ್ದಂತೆ ವಿದ್ಯುದ್ದೀಪ ಆರಿ
ಕನ್ನಡಿಯೊಳು ಕಾಣುವಾತನಿರಲಿ,
ನನಗೆ ನಾನೇ ಕಾಣಲಿಲ್ಲ ಎಲ್ಲೂ -
ದೀಪ
ಮರಳುವ
ತನಕ

- ಶ್ಯಾಮಸುಂದರ ಬಿದರಕುಂದಿ

# ಅಕ್ಕ

ಅಕ್ಕ ನೀನೇ ದಿಟ್ಟೆ
ಸಂಸಾರದಿಂದ ಪಾರಾಗಲು
ಕೌಶಿಕನಿಗೆ ಷರತ್ತು ಹಾಕಿಬಿಟ್ಟೆ
ತೊಟ್ಟ ಬಟ್ಟೆಯ ಬದಿಯಲಿಟ್ಟು
ಕೇಶರಾಶಿಯನೆ ಅಂಗೀಕರಿಸಿಬಿಟ್ಟೆ
ಸತ್ತು ಬದುಕುವ ಗಂಡರ ಹೊಲೆಯೊಳಗಿಟ್ಟೆ
ಅನುಭವ ಮಂಟಪದಲಿ ಧ್ವನಿಎತ್ತಿಬಿಟ್ಟೆ
ಕದಳಿ ವನಕೆ ಹೆಜ್ಜೆ ಇಟ್ಟೆ
ಸಾಸಿವೆಯಷ್ಟು ನಂಬಿಕೆ
ಸಾಗರದಷ್ಟು ದುಃಖ ಎಂದು ಸಂದೇಶ ಕೊಟ್ಟೆ.

- *ಲಲಿತಾ ಪಿ. ಅಂಗಡಿ*

# ಆಶಾವಾದಿ

ಬಂಜರು ಭೂಮಿಯಲೂ
ಚೆಂಗುಲಾಬಿ, ಗುಲ್‌ಮೊಹರ್
ಜಾಜಿ ಹೂವುಗಳ
ಕನಸು ಕಾಣುವಾತ!

- *ಶೋಭಾ ಪ್ರಮೋದ್*

# ಮೂತ್ರಪಿಂಡ ವೈಫಲ್ಯಕ್ಕೆ ಕಾರಣಗಳು ಮತ್ತು ಪರಿಹಾರಗಳು

ದೇಹ ಆರೋಗ್ಯವಾಗಿರಲು ಮೂತ್ರಪಿಂಡದ ಕಾರ್ಯ ಬಹಳ ಹಿರಿದಾಗಿದೆ. ರಕ್ತವನ್ನು ಶುದ್ಧೀಕರಿಸಿ ದೇಹದ ಅಂಗಾಂಗಳಿಗೆ ಸರಬರಾಜು ಮಡುವ ಕೆಲಸ ಮೂತ್ರಪಿಂಡದ್ದಾಗಿದೆ. ತ್ಯಾಜ್ಯ ವಸ್ತುಗಳಾದ BUN (BLOOD AREA NITROGEN) ಮತ್ತು creatine ಇವುಗಳನ್ನು ಸಂಸ್ಕರಿಸಿ ಮತ್ತು ದೇಹದ Electrolytes (Sodium, Potassium, Chlorides) ಗಳನ್ನು ಸಮತೋಲನದಲ್ಲಿಟ್ಟು ರಕ್ತದೊತ್ತಡವನ್ನು ನಿಯಂತ್ರಿಸಿ ಕೆಂಪು ರಕ್ತಕಣಗಳ ಉತ್ಪಾದನೆಗೆ ಉತ್ತೇಜನ ನೀಡುವ ಮೂಲಕ ದೇಹದ ಇಡೀ ವ್ಯವಸ್ಥೆಯನ್ನು ನಿಯಂತ್ರಣದಲ್ಲಿಟ್ಟು ಕೊಳ್ಳುವುದು ಮೂತ್ರಪಿಂಡ. ಮೂತ್ರಪಿಂಡವು ದೇಹದ ದ್ರವದ ಪ್ರಮಾಣವನ್ನು ಮತ್ತು Acid Base ಸಮತೋಲನವನ್ನು ಸರಿಯಾಗಿ ಇರುವಂತೆ ನೋಡಿಕೊಳ್ಳುತ್ತದೆ. ಮೂತ್ರಪಿಂಡ ಹೊಟ್ಟೆಯ ಹಿಂದೆ ಬೆನ್ನು ಮೂಳೆಯ ಎರಡೂ ಬದಿಯಲ್ಲಿ ನೆಲೆಗೊಂಡಿದೆ. ರಕ್ತ ಶುದ್ಧೀಕರಿಸುವ ತನ್ನ ಕಾರ್ಯವನ್ನು ಮೂತ್ರಪಿಂಡ ಕಳೆದುಕೊಳ್ಳುವುದಕ್ಕೆ ಮೂತ್ರಪಿಂಡದ ವೈಫಲ್ಯ ಎನ್ನುವರು.

ಸಣ್ಣ ಪ್ರಮಾಣದ ಮೂತ್ರಪಿಂಡದ ತೊಂದರೆಯಿಂದ ಮೂತ್ರಪಿಂಡದ ವೈಫಲ್ಯದವರೆಗೂ ಈ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಸತತ ಮೂತ್ರಪಿಂಡ ವೈಫಲ್ಯದಿಂದಾಗಿ ದ್ರವ ಪದಾರ್ಥಗಳು ಹಾಗೂ ತ್ಯಾಜ್ಯ ಪದಾರ್ಥಗಳು ದೇಹದಲ್ಲೇ ಸಂಗ್ರಹವಾಗುತ್ತದೆ. ಇದರಿಂದ Azemia ಹಾಗೂ Uremia ಎಂಬ ತೊಂದರೆಗಳು ಕಂಡು ಬರುತ್ತದೆ. Azemia ಎಂದರೆ ರಕ್ತದಲ್ಲಿನ ನೈಟ್ರೋಜನ್ ತ್ಯಾಜ್ಯಗಳ ಪ್ರಮಾಣ ಹೆಚ್ಚುವುದು. ಈ ಹೆಚ್ಚಳದ ಯಾವ ಲಕ್ಷಣಗಳಿಗೂ ರೋಗಿಗೆ ಸದ್ಯಕ್ಕೆ ಕಂಡು ಬರುವುದಿಲ್ಲ. ಮೂತ್ರ ಪಿಂಡಗಳ ಸಂಪೂರ್ಣ ವೈಫಲ್ಯ ಉಂಟಾಗುವ ಸ್ಥಿತಿಗೆ Uremia ಎನ್ನುತ್ತಾರೆ.

ತೂಕನಷ್ಟ, ತಲೆಸುತ್ತಿವಿಕೆ, ವಾಂತಿ, ಸಮಾನ್ಯವಾಗಿ ಅನಾರೋಗ್ಯದ ಭಾವನೆ, ಸುಸ್ತು, ಬಳಲಿಕೆ, ತಲೆನೋವು, ಪದೇ ಪದೇ ಬಿಕ್ಕಳಿಕೆ, ತುರಿಕೆ ಮುಂತಾದವು ಕಿಡ್ನಿ **ವೈಫಲ್ಯದ ಪ್ರಾರಂಭಿಕ ಲಕ್ಷಣಗಳಾದರೆ ನಂತರದ ಲಕ್ಷಣಗಳು ಈ ಕೆಳಗಿನಂತಿವೆ.**

1) ಮೂತ್ರ ವಿಸರ್ಜನೆ ಗಣನೀಯವಾಗಿ ಹೆಚ್ಚಾಗುವಿಕೆ ಅಥವಾ ಕಡಿಮೆಯಾಗುವಿಕೆ.
2) ರಾತ್ರಿ ಹೊತ್ತಿನಲ್ಲಿ ಮೂತ್ರ ವಿಸರ್ಜನೆ ಹೆಚ್ಚಳ
3) ಗಾಯಗೊಳ್ಳುವ ಅಥವಾ ರಕ್ತಸ್ರಾವದ ಸಾಧ್ಯತೆಯ ಹೆಚ್ಚಳ
4) ವಾಂತಿಯಲ್ಲಿ ಅಥವಾ ಮಲದಲ್ಲಿ ರಕ್ತ
5) ಕಡಿಮೆಯಾದ ಚುರುಕುತನ, ನಿದ್ರಾಸ್ಥಿತಿ, ಆಲಸ್ಯ, ಜಡತ್ವ, ಗೊಂದಲ ಜ್ವರ ಮುಂತಾದವು.
6) ಕೈಕಾಲು ಪಾದ ಮತ್ತಿತರ ಭಾಗಗಳಲ್ಲಿ ಸ್ಪರ್ಶಜ್ಞಾನ ಕಡಿಮೆಯಾಗುವುದು.
7) ಚರ್ಮದ ಮೇಲೆ ಹಾಗೂ ಒಳಗೆ ಬಿಳಿ ಹರಳುಗಳ ಸಂಗ್ರಹ
8) ಹೆಚ್ಚಿದ ನೀರಡಿಕೆ, ಹೆಚ್ಚಿದ ರಕ್ತದೊತ್ತಡ, ಹಸಿವಾಗದಿರುವುದು, ಉದ್ವಿಗ್ನವಾಗುವುದು.
9) ಅಸಹಜವಾದ ಗಾಢ ಅಥವಾ ತಿಳಿವರ್ಣ ತಾಳಿದ ಚರ್ಮ
10) ಬಿಳಿಚಿಕೊಳ್ಳುವಿಕೆ, ಅಸಹಜ ಉಗುರುಗಳು, ಉಸಿರಾಟದಲ್ಲಿ ವಾಸನೆ.

**ಕಿಡ್ನಿ ವೈಫಲ್ಯದ ಪರೀಕ್ಷೆ ಹಾಗೂ ತಪಾಸಣೆಗಳು :**

ರಕ್ತದೊತ್ತಡ ತೀವ್ರವಾಗಿರಬಹುದು, ಪಾಲಿನ್ಯೂರೋಪತಿಯನ್ನು (Polyneuropathy) ಪತ್ತೆ ಹಚ್ಚಲು ನ್ಯೂರೋಲಾಜಿಕಲ್ ಪರೀಕ್ಷೆ ಮಾಡಬಹುದು. ಸ್ಟೆತೋಸ್ಕೋಪಿನಿಂದ ಕೇಳಿದಾಗ ಅಸಹಜವಾದ ಹೃದಯ ಹಾಗೂ ಪುಪ್ಪಸಗಳ ಸದ್ದು, ಮೂತ್ರದಲ್ಲಿ ಪ್ರೋಟೀನ್ ಮತ್ತಿತರ ಅಸಹಜ ಗುಣಗಳು ರೋಗ ಲಕ್ಷಣಗಳು ಕಾಣಿಸಿಕೊಳ್ಳುವ 6 ರಿಂದ 10 ತಿಂಗಳು ಮೊದಲೇ ಈ ಬಗೆಯ ಮೂತ್ರ ಪರೀಕ್ಷೆಯಲ್ಲಿ ತಿಳಿಯಬಹುದು.

1) ಕ್ರಿಯೇಟಿನೈನ್ (Creatinine) ಪ್ರಮಾಣ ಏರುತ್ತಾ ಹೋಗುವುದು.
2) BUN (Blood Urea Nitrogen) ಪ್ರಮಾಣದಲ್ಲಿ ಸತತ ಏರಿಕೆ.
3) ಕ್ರಿಯೇಟಿನೈನ್ ವಿಸರ್ಜನೆಯ ಪ್ರಮಾಣ ಕ್ರಮೇಣ ತಗ್ಗುವುದು.
4) ಪೊಟ್ಯಾಷಿಯಂ ಪರೀಕ್ಷೆಯಲ್ಲಿ ಹೆಚ್ಚಿನ ಪ್ರಮಾಣ ಕಾಣಿಸಿಕೊಳ್ಳುವುದು.
5) ರಕ್ತನಾಳದ ವಾಯು ಮತ್ತು ರಕ್ತದ ರಾಸಾಯನಿಕ ತಪಾಸಣೆಯಲ್ಲಿ ಚಯಾಪಚಯ ಕ್ರಿಯೆಗಳ ಅಸಿಡೋಸಿಸ್ ಕಾಣಿಸುವುದು.

ಸತತ ಮೂತ್ರಪಿಂಡ ವೈಫಲ್ಯ ಕಾಣಿಸಿಕೊಂಡರೆ ಎರಡೂ ಮೂತ್ರಪಿಂಡಗಳು ಸಹಜ ಗಾತ್ರಕ್ಕಿಂತ ಚಿಕ್ಕದಾಗುತ್ತದೆ.

ಹೊಟ್ಟೆಯ ಅಥವಾ ಮೂತ್ರಪಿಂಡಗಳ ಕ್ಷಕಿರಣ, ಹೊಟ್ಟೆಯ ಸಿಟಿಸ್ಕ್ಯಾನ್, ಹೊಟ್ಟೆಯ MRI, ಹೊಟ್ಟೆಯ ಅಲ್ಟ್ರಾಸೌಂಡ್ (Ultrasound) ಮುಂತಾದ ಪರೀಕ್ಷೆಗಳಿಂದ ಮೂತ್ರಪಿಂಡ ವೈಫಲ್ಯದ ಮಟ್ಟವನ್ನು ತಿಳಿಯಬಹುದು.

ಎರಡು ವಾರಕ್ಕಿಂತಲೂ ಹೆಚ್ಚು ಕಾಲ ತಲೆ ಸುತ್ತುವಿಕೆ ಅಥವಾ ವಾಂತಿ ಮುಂದುವರೆದರೆ ತಕ್ಷಣ ವೈದ್ಯರನ್ನು ಸಂಪರ್ಕಿಸಬೇಕು ಅಲ್ಲದೆ ಮೂತ್ರ ವಿಸರ್ಜನೆಯ ಪ್ರಮಾಣ ಕಡಿಮೆಯಾದರೆ ಹಾಗೂ ಮೂತ್ರ ಪಿಂಡ ವೈಫಲ್ಯದ ಇತರ ಲಕ್ಷಣಗಳು ಕಂಡುಬಂದ ತಕ್ಷಣ ವೈದ್ಯರ ಸಲಹೆಯನ್ನು ಕೇಳಬೇಕು.

**ಕಿಡ್ನಿ ಆರೋಗ್ಯವಾಗಿರಲು ಮಾಡಬೇಕಾದ ಆಹಾರ ಕ್ರಮಗಳು :**

1) ಪ್ರಮುಖವಾಗಿ ದಿನಕ್ಕೆ 8–10ಗ್ಲಾಸ್ ನೀರು ಕುಡಿಯುವ ಅಭ್ಯಾಸ ಬೆಳೆಸಿಕೊಳ್ಳಬೇಕು. ನಾರಿನ ಪದಾರ್ಥಗಳನ್ನು ಹೆಚ್ಚಾಗಿ ಸೇವಿಸಬೇಕು.

✍ ಶಾರದಾ ಎ. ಅಂಚನ್

ಬಾಳೆದಿಂಡಿನ ಪಲ್ಯ, ಬಾಳೆಹೂವಿನ ಪಲ್ಯಮಾಡಿ ತಿಂದರೆ ಒಳ್ಳೆಯದು.

2) ಕೆಂಪು ದುಂಡು ಮೆಣಸಿನ ಕಾಯಿಯನ್ನು ತಿಂದರೆ ತೂಕ ಕಡಿಮೆಯಾಗುವುದು ಮಾತ್ರವಲ್ಲ ಕಿಡ್ನಿ ಸ್ಟೋನ್ ಪೋಗಲಾಡಿಸಲು ಕೂಡಾ ಸಹಕಾರಿಯಾಗಿದೆ. ಇದರಲ್ಲಿ ನಾರಿನಂಶ ವಿಟಾಮಿನ್ ಬಿ6, ವಿಟಾಮಿನ್ ಎ, ಪೋಲಿಕ್ ಆಸಿಡ್ ಮತ್ತು ಇತರ ಕಿಡ್ನಿಯನ್ನು ಶುದ್ಧಗೊಳಿಸುವ ಅಂಶವನ್ನು ಹೊಂದಿವೆ. ಇದನ್ನು ಎಣ್ಣೆಯಲ್ಲಿ ಹುರಿದು ತಿನ್ನದೆ ಬೇಯಿಸಿ ಅದರಲ್ಲೂ ಅರ್ಧ ಬೆಂದ ದುಂಡು ಮೆಣಸು ತಿನ್ನುವುದು ಒಳ್ಳೆಯದು.

3) ಮೊಟ್ಟೆ ಬಿಳಿಭಾಗದಲ್ಲಿ ಅಧಿಕ ಪ್ರೊಟೀನ್ ಇರುವುದರಿಂದ ಪ್ರತಿನಿತ್ಯ ಒಂದು ಮೊಟ್ಟೆ ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು. ಕಿಡ್ನಿ ಸಮಸ್ಯೆ ಇರುವವರು ದಿನಕ್ಕೆ ಒಂದು ಅಥವಾ ಎರಡು ಮೊಟ್ಟೆಯ ಬಿಳಿಭಾಗ ಮಾತ್ರ ತಿನ್ನಲೇ ಬೇಕು.

4) **ಹೂಕೋಸು ಮತ್ತು ಎಲೆಕೋಸು :** ಎಲೆಕೋಸಿನಲ್ಲಿರುವ ವಿಟಾಮಿನ್ ಕೆ ಮತ್ತ ಹೂಕೋಸಿನಲ್ಲಿರುವ ವಿಟಾಮಿನ್ ಸಿ ಕಿಡ್ನಿಗೆ ಆರೋಗ್ಯ ನೀಡುತ್ತದೆ. ಕಿಡ್ನಿ ಸಮಸ್ಯೆ ಇರುವವರು ಪೊಟ್ಯಾಶಿಯಂ ಇರುವ ಆಹಾರವನ್ನು ತಿನ್ನಬಾರದು. ಕಲ್ಲಂಗಡಿ ಹಣ್ಣಿನಲ್ಲಿ ಪೊಟ್ಯಾಷಿಯಂ ಇರುವುದರಿಂದ ಅದನ್ನು ತಿನ್ನಬಾರದು.

5) ದಾಳಿಂಬೆ ಜ್ಯೂಸ್ ಸೇವಿಸಿದರೆ ಒಳ್ಳೆಯದು ಇದು ರಕ್ತದೊತ್ತಡ ಮತ್ತು ಕೊಲೆಸ್ಟ್ರಾಲ್ ಮಟ್ಟವನ್ನು (cholesterol) ತಗ್ಗಿಸುತ್ತದೆ.

6) ಕಿತ್ತಳೆ, ಸ್ಟ್ರಾಬೆರಿ, ದ್ರಾಕ್ಷಿ ಕಿಡ್ನಿಗೆ ನಿಜಕ್ಕೂ ಅವಶ್ಯಕ ಆಹಾರ. ಇದು

ದೇಹದ ಉರಿ ಕಡಿಮೆ ಮಾಡುತ್ತದೆ. ಆದ್ದರಿಂದ ಈ ಹಣ್ಣುಗಳನ್ನು ತಿನ್ನಬೇಕು. ಬೆಳಿಗ್ಗೆ ಎದ್ದ ಕೂಡಲೇ ನಿಂಬೆಹಣ್ಣಿನ ಜ್ಯೂಸ್ ಕುಡಿಯುವುದು ಒಳ್ಳೆಯದು.

7) ಆಲೀವ್ ಎಣ್ಣೆ ದೇಹಕ್ಕೆ ತುಂಬಾ ಒಳ್ಳೆಯದು ಎಂದು ವೈಜ್ಞಾನಿಕವಾಗಿ ಸಾಬೀತುಗೊಂಡಿದೆ. ಇದು ಕಿಡ್ನಿಗೆ ಮಾತ್ರವಲ್ಲ ಇಡೀ ದೇಹಕ್ಕೂ ಒಳ್ಳೆಯದಾಗಿದೆ.

**ಮೂತ್ರ ಹೊಂಡ ಸಮಸ್ಯೆ ಇರುವವರು ತಿನ್ನಬಾರದ ಆಹಾರಗಳು :**

1) ಅಧಿಕ ಸೋಡಿಯಂ ಇರುವ ಆಹಾರವನ್ನು ತಿನ್ನಬಾರದು. ಉಪ್ಪನ್ನು ಆದಷ್ಟು ಕಡಿಮೆ ಪ್ರಮಾಣದಲ್ಲಿ ಬಳಸಬೇಕು.

2) ಮದ್ಯವನ್ನು ಮುಟ್ಟಬಾರದು. ಮಾಂಸವನ್ನು ತಿನ್ನದಿದ್ದರೆ ಒಳ್ಳೆಯದು ಅಥವಾ ತಿನ್ನಬಾರದು.

3) ದೇಹದಲ್ಲಿ ಉಷ್ಣತೆ ಹೆಚ್ಚಿಸುವ ಆಹಾರ ಸೇವನೆ ಮಾಡಬಾರದು.

4) ನಟ್ಸ್ ಮತ್ತು ಪಾಲಕ್ ಸೊಪ್ಪನ್ನು ತಿನ್ನದಿರುವುದು ಒಳ್ಳೆಯದು. ಏಕೆಂದರೆ ಆಕ್ಸಿಲೇಟ್ (Oxilate) ಇರುವ ಆಹಾರಗಳು ಕಿಡ್ನಿ ಆರೋಗ್ಯಕ್ಕೆ ಅಷ್ಟು ಒಳ್ಳೆಯದಲ್ಲ.

5) ತಂಪು ಪಾನೀಯಗಳನ್ನು ಕುಡಿಯಬಾರದು.

6) ಕಿಡ್ನಿ ಸಮಸ್ಯೆ ಇರುವವರು ಟೀ ಕುಡಿಯುವ ಅಭ್ಯಾಸವನ್ನು ಬಿಡಬೇಕು.

ಈ ಎಲ್ಲಾ ಮೇಲಿನ ಆಹಾರ ಪಥ್ಯಗಳನ್ನು ಪಾಲಿಸಿದರೆ ಸಾಧ್ಯವಾದಷ್ಟು ಮಟ್ಟಿಗೆ ಮೂತ್ರ ಪಿಂಡದ ಕಾಯಿಲೆಗಳನ್ನು ದೂರಮಾಡಿ ಆರೋಗ್ಯಕರ ಜೀವನ ನಡೆಸಬಹುದಾಗಿದೆ.

●

---

# ಕಾಮ ಪಿಪಾಸು

ಪ್ರೇಮಿಸುವ ಮನ ಮೋಹಿಸುವ ಮನ
ಕಾಮಿಸುವ ಮನ ಕ್ರೂರಿಸುವ ಮನ
ಅಡಗಿ ಕೂತಿರುವ ಮನಕೆ ಮೇಲೆ ಚರ್ಮದ ಹೊದಿಕೆ

ಬೆಳೆದು ಬೆಳಗುವ ಬಾಲ ಕುಸುಮವೊಂದು
ದುರುಳನೊಳಗಿನ ಕ್ರೂರ ಕಣ್ಣಿಗದು
ತೆಳು ಚರ್ಮದೊದಿಕೆಯ ಮಾಂಸಮುದ್ದೆ

ಎಡತಾಕಿದ ಗಂಡುಕೇಳಿಯ ಕಂಡು
ಕಂಡು ಕೇಳರಿಯದ ವಿಕೃತವ ನೆನೆದು
ಬೆಂಡು ಬೆಂಡಾಗಿ ಬೆದರಿ ಬೀಳುವ ಬಾಲೆ

ಚಪಲದಾಚೆಯ ಮನದ ಕಣ್ತೆರೆದು ನೋಡು
ಹೆತ್ತ ಕರುಳ ಕುಡಿಯ ಕಿಡಿಯಾಗಿ ನೋಡು
ಅರಳುತಿಹ ಮೊಗ್ಗಿನ ಮುಗ್ಧಮನ ನೋಡು

ಭವದ ಭಾವದ ಬದುಕಿನ ನೋಟದಲಿ
ಸಾರ್ಥಕ್ಯ ಜೀವನದ ಒಳಗಣ್ಣ ನೋಟದಲಿ
ಮಮತೆಯೊಲುಮೆಯ ಮಿಡಿವ ಮನವು ನೀನಾಗು

**– ಉಮಾಶಂಕರ್, ಸಿ.ಎಂ.**

**(ನೇಸರು ಜಾಗತಿಕ ಕನ್ನಡ ಕವನ ಸ್ಪರ್ಧೆಗೆ ಬಂದ ಕವನ)**

**ಜೀವಿ ವಚನ–56**

# ಪರಿಶುದ್ಧ ಪ್ರೀತಿ

1

ತಂದೆತಾಯಿ ಮಕ್ಕಳಿಗೆ ನೀಡುತ್ತಿರಬೇಕು ಪರಿಶುದ್ಧ ಪ್ರೀತಿ,
ಅದುವೆ ವಾತ್ಸಲ್ಯಪಥ.
ತಾಯಿಯ ಹಾಲು ಕುಡಿದ ಮಗು ನೈಸರ್ಗಿಕವಾಗಿ
ರೋಗನಿರೋಧಕ ಶಕ್ತಿ ಪಡೆಯುವುದು.
ತಂದೆಯ ಅಕ್ಕರೆ ಪಡೆದ ಮಗು ಧೈರ್ಯಶಾಲಿ ಆಗುವುದು.
ಪಶುಗಳಿಗೂ ಪ್ರೀತಿ ಬೇಕು.
ಗಿಡ ಮರಗಳಿಗೂ ಪ್ರೀತಿ ಬೇಕು, ಪ್ರೀತಿಸಿ ನೋಡಿ, ಹೇಗೆ
ಬೆಳೆಯುತ್ತವೆ ಕಣ್ಣಾರೆ ನೋಡಿರಿ.
ಕಲ್ಲು ಕೂಡ ಶಿಲ್ಪಿಯ ಪ್ರೀತಿ ಪಡೆದು ಮೂರ್ತಿಯಾಗುವುದು,
ಪೂಜಾರ್ಹವಾಗುವುದು.

2

ಕಾಮ ಕೆಸರಾದರೆ, ಇಡ್ಡಾದರೆ ಜಿಡ್ಡಾದರೆ, ಪ್ರೀತಿ ಅದರಲ್ಲಿ
ಅರಳಿನಿಂತ ಕಮಲ.
ಪ್ರೀತಿ ಕಮಲವಾದರೆ, ಪುಷ್ಪವಾದರೆ, ವಾತ್ಸಲ್ಯ ಅದರ ಮಧು,
ಮಕರಂದ.
ಕಾಮ ಮಾಗಿ ಹಣ್ಣಾದಾಗ ಪ್ರೀತಿಯಾಗುವುದು, ಪ್ರೀತಿಯೇ
ಭಕ್ತಿಯಾಗುವುದು.
ಕಾಮ–ಪ್ರೇಮ–ಭಕ್ತಿಗಳಿಂದ ಜೀವನದಿ ನಿಜವಾದ ಸಂತೃಪ್ತಿ
ದೊರೆಯುವುದು.
ಪ್ರೀತಿಯ ಬಂಗಾರ ಕಾಸಿ, ಸುತ್ತಿಗೆಯಿಂದ ಬಡಿದಾಗ, ಅದು
ಅಪರಂಜಿಯಾಗುವುದು.

3

ಭೋಗದಲ್ಲೇ ಕೊಳೆಯದಿರಿ, ಯೋಗದಿಂದ ಮಲಮಲಿಸಿರಿ.
ಕಾಮದಲ್ಲಿ ಕೊರಗದಿರಿ, ಪ್ರೇಮದಿಂದ ಲವಲವಿಸಿರಿ.
ತನ್ನ ತಾನೆ ಪ್ರೀತಿಸುವುದು ಯೋಗವಲ್ಲ ಅದುವೆ ಭೋಗ
ದೇವನಲ್ಲಿ ಇಡುವ ಪ್ರೀತಿ ನೈಜವಾದ ಭಕ್ತಿಯೋಗ.
ಪ್ರೀತಿಯೆ ಓಂಕಾರವಾಗಿ ಮೂರು ಜಗವ ಮೊಳಗುತಿದೆ.

4

ದ್ವೇಷದ ರೋಗದಿ ಬಳಲಿದವಗೆ, ಪ್ರೀತಿಯೆ ಪರಮೌಷಧಿ,
ಅಸೂಯೆಯ ಕಿಚ್ಚಿನಲಿ ಬೆಂದವರಿಗೆ, ಪ್ರೀತಿಯೇ ಪರಮೌಷಧಿ
ಮತ್ಸರದಲ್ಲಿ ಮುಳುಗಿದವರಿಗೆ, ಪ್ರೀತಿಯೆ ಪರಮೌಷಧಿ.
ನಿರಾಸೆಯ ಬಿಸಿಲಲಿ ಬಾಡಿದವರಿಗೆ ಪ್ರೀತಿಯೇ ಪರಮೌಷಧಿ,
ಎಲ್ಲ ನಕಾರಗಳಿಗೂ ಪ್ರೀತಿಯೇ ಸಕಾರಾತ್ಮಕ ಪರಮೌಷಧಿ.

**– ಡಾ। 'ಜೀವಿ' ಕುಲಕರ್ಣಿ**

(ಸ್ವಾಮಿ ಜಗದಾತ್ಮಾನಂದರ 'ಬದುಕಲು ಕಲಿಯಿರಿ' ಅಧ್ಯಾಯ ನಾಲ್ಕರಿಂದ ಸ್ಫುರಿಸಿದ್ದು)

# ಮುಂಬಯಿ ವಿವಿ ಕನ್ನಡ ವಿಭಾಗದಲ್ಲಿ 'ಬೇಂದ್ರೆ ಕಾವ್ಯಾನುಭವ' ಕಾರ್ಯಕ್ರಮ



ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗವು ಬೇಂದ್ರೆ ಸ್ಮಾರಕ ರಾಷ್ಟ್ರೀಯ ಟ್ರಸ್ಟ್ ಧಾರವಾಡ ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ನವದೆಹಲಿ ಇವುಗಳ ಸಹಯೋಗದಲ್ಲಿ ಇತ್ತೀಚೆಗೆ ಸಾಂತಾಕ್ರೂಸ್ ಪೂರ್ವದಲ್ಲಿನ ಕಲೀನಾ ಕ್ಯಾಂಪಸ್‌ನ ಮುಂಬಯಿ ವಿಶ್ವವಿದ್ಯಾಲಯದ ಜೆ.ಪಿ. ನಾಯಕ್ ಭವನದಲ್ಲಿ 'ಬೇಂದ್ರೆ ಕಾವ್ಯಾನುಭವ' ರಾಷ್ಟ್ರೀಯ ವಿಚಾರ ಸಂಕಿರಣ ಕಾರ್ಯಕ್ರಮ ಆಯೋಜಿಸಿದ್ದು, ಬೇಂದ್ರೆ ಸ್ಮಾರಕ ರಾಷ್ಟ್ರೀಯ ಟ್ರಸ್ಟ್ ಧಾರವಾಡ ಇದರ ಅಧ್ಯಕ್ಷ ಮತ್ತು ಹಿರಿಯ ಸಾಹಿತಿ ಡಾ. ಶ್ಯಾಮ ಸುಂದರ ಬಿದರಕುಂದಿ ದೀಪ ಪ್ರಜ್ವಲಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ವಿಚಾರವಾದಿ, ಚಿಂತಕ ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ಕನ್ನಡ ಅಧ್ಯಯನ ಕೇಂದ್ರ ಧಾರವಾಡ ಇದರ ಮುಖ್ಯಸ್ಥ ಡಾ. ಧನವಂತ ಹಾಜವಗೋಳ ವೇದಿಕೆಯಲ್ಲಿ ಅಸೀನರಾಗಿದ್ದು ಸಂಶೋಧಕ ಹಾಗೂ ವಿಮರ್ಶಕ ಡಾ. ಸರ್ಫ್‌ರಾಜ್ ಮತ್ತು ಕಲಾವಿದ ಅನಂತ ದೇಶಪಾಂಡೆ ಬೇಂದ್ರೆ ಕುರಿತು ಉಪನ್ಯಾಸ ನೀಡಿದರು.

ಡಾ. ಪುರುಷೋತ್ತಮ ಬಿಳಿಮಲೆ ಮಾತನಾಡಿ, ಬೇಂದ್ರೆ ಅಂದರೆ ರೋಮಾಂಚಕ ಮತ್ತು ಜೀವನಕ್ಕೆ ಉತ್ಸಾಹ ತುಂಬುವ ಶಕ್ತಿಯಾಗಿದೆ. ಅವರ ನಾಲ್ಕು ಕವನ ಸಂಕಲನಗಳು ಜಗತ್ತಿನ ಯಾವುದೇ ಸಾಹಿತ್ಯ, ಭಾಷೆಗಳ ತರ್ಕಕ್ಕೂ ನಿಲ್ಲದ ಕೃತಿಗಳಾಗಿವೆ. ಇಂತಹ ಮೇಧಾವಿಗಳ ಕೃತಿಗಳ ಓದಿನಿಂದ ಮಹಾನುಭವ ಸಾಧ್ಯ ಮತ್ತು ಓದಿನಿಂದ ಘನತೆ ರೂಪಿಸಿಕೊಳ್ಳಬಹುದು. ೭೦ರ ದಶಕದ ಕವಿಗೆ ೨೧ನೇ ಶತಮಾನದಲ್ಲೂ ಮಹತ್ವವಿದೆ. ಅಂದರೆ ಬೇಂದ್ರೆ ಬರಹ ಎಷ್ಟು ಪ್ರಭಾವಶಾಲಿ ಇರಬಹುದೆಂದು ಊಹಿಸಲಸಾಧ್ಯ. ಇಂದಿನ ಕಾಲೇಜು ವಿದ್ಯಾರ್ಥಿಗಳ ಬೀಳ್ಕೊಡುವಿಕೆಯ ಸ್ವಹಸ್ತಲೇಖನ (ಆಟೋಗ್ರಫಿಯಲ್ಲೂ) ಬೇಂದ್ರೆ ವಚನ ಸಾಲುಗಳು ರಾರಾಜಿಸುತ್ತಿರುವುದು ಗಮನೀಯ ಅಂಶ. ಮಾತೃತ್ವದ ಶಕ್ತಿಕೊಡುವ ಸ್ಪರ್ಶ ಬೇಂದ್ರೆ ಕವನಕ್ಕಿದೆ. ಇಂತಹ ಪದ್ಯಗದ್ಯಗಳ ಅಳವಡಿಸುವುಕೆ ಯಿಂದ ಕ್ರೌರ್ಯ ಮುಕ್ತ ಸಮಾಜ ಕಟ್ಟಲು ಸಾಧ್ಯ ಎಂದರು.

ಬೇಂದ್ರೆ ಕವನಕ್ಕಿದೆ. ಇಂತಹ ಪದ್ಯಗದ್ಯಗಳ ಅಳವಡಿಸುವಿಕೆಯಿಂದ ಕ್ರೌರ್ಯ ಮುಕ್ತ ಸಮಾಜ ಕಟ್ಟಲು ಸಾಧ್ಯ ಎಂದರು.

ಬೇಂದ್ರೆ ಅವರ ಜೀವನವೇ ಕಾವ್ಯ. ಕಾವ್ಯ ಅವರಿಗೆ ಉದ್ಯೋಗವಾಗಿತ್ತು. ಬೇಂದ್ರೆ ಸಾಹಿತ್ಯ ಕೃತಿಗಳಲ್ಲೇ ಚಿಂತನೆಗಳು ಅಭಿವಕ್ಯವಾಗಿದ್ದು, ನವ ಮಾನವತೆಯ ಉದಯಕ್ಕೆ ಬೇಂದ್ರೆ ಬದುಕು ಮಾದರಿ ಎಂದು ಡಾ. ಬಿದರಕುಂದಿ ತಿಳಿಸಿದರು.

ಡಾ. ಹಾಜವಗೋಳ ಮಾತನಾಡಿ, ಬೇಂದ್ರೆ ಮಹಾಕಾವ್ಯ ರಚಿಸಿಲ್ಲ ಅಂದಮಾತ್ರಕ್ಕೆ ಬೇಂದ್ರೆ ಮಹಾಕವಿ ಅಲ್ಲ ಎನ್ನಲಾಗಲ್ಲ. ನವೋದಯ ಕಾವ್ಯದ ಎಲ್ಲಾ ಲಕ್ಷಣಗಳನ್ನು ಕವಿತೆಯಲ್ಲಿ ತರಲು ಪ್ರಯತ್ನಿಸಿದ ಮಹಾಕವಿಯೇ ಬೇಂದ್ರೆ ಎಂದರು.

ಮಹಾರಾಷ್ಟ್ರದ ಕನ್ನಡಿಗರಿಂದ ರೂಪಿತ ಮುಂಬಯಿ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಮುಖ್ಯಸ್ಥ ಡಾ. ಜಿ.ಎನ್. ಉಪಾಧ್ಯ ಸಂಪಾದಿತ ಬೇಂದ್ರೆ ಟ್ರಸ್ಟ್, ಧಾರವಾಡ ಪ್ರಕಾಶಿತ 'ಬೇಂದ್ರೆ ಕವಿತೆಗಳ ಪ್ರಾಯೋಗಿಕ ವಿಮರ್ಶೆ' ಕೃತಿಯನ್ನು ಡಾ. ಪುರುಷೋತ್ತಮ ಬಿಳಿಮಲೆ ಬಿಡುಗಡೆಗೊಳಿಸಿದರು. ಕನ್ನಡ ವಿಭಾಗ ಸಂದರ್ಶಕ ಪ್ರಾಧ್ಯಾಪಕ ಡಾ. ಕೆ. ರಾಘುನಾಥ್ ಕೃತಿ ವಿಮರ್ಶೆಗೈದರು. ಮುಕುಂದ ಕುಲಕರ್ಣಿ ಅವರ ಭಾಗೀತೆಯೊಂದಿಗೆ ಕಾರ್ಯಕ್ರಮ ಆದಿಗೊಂಡಿತು. ಪದ್ಮನಾಭ ಸಸಿಹಿತ್ಲು, ಸುಶೀಲಾ ದೇವಾಡಿಗ, ಅಪರ್ಣಾ ಭಟ್, ಶ್ರದ್ಧಾ ಬಂಗೇರ ಅವರು ಬೇಂದ್ರೆ ಗೀತಾಗುಂಜನ ನಡೆಸಿಕೊಟ್ಟರು. ಕನ್ನಡ ವಿಭಾಗದ ಸಹಾಯಕಿ ಡಾ. ಪೂರ್ಣಿಮಾ ಎಸ್. ಶೆಟ್ಟಿ ಮತ್ತು ಡಾ. ಜ್ಯೋತಿ ಸತೀಶ್ ಸ್ವಾಗತಿಸಿ ಸಂಪನ್ಮೂಲ ವ್ಯಕ್ತಿಗಳ ಪರಿಚಯಿಸಿ ಕಾರ್ಯಕ್ರಮ ನಿರ್ವಹಿಸಿದರು. ವಿಭಾಗದ ವಿದ್ಯಾರ್ಥಿನಿ ಗೀತಾ ಅವರು ವಂದಿಸಿದರು.

# OBITUARY



Life member, Smt. Anuradha alias Ambujakshi Shiralkar passed away peacefully at home amid her family on 12th October, 2016 at about 10.30 am. She hailed from Vontikoppal, Mysore. She was wife of Late Shri Vyankatesh Shiralkar, deeply mourned by her three children and their families. We pray the departed soul to rest in peace and the family to bear this loss with courage.

# ಬಿ. ಸಚ್ಚಿದಾನಂದ ಹೆಗ್ಡೆಯವರ ಹೊಸ ಕೃತಿ ತುಳುನಾಡವರ ರೀತಿ ರಿವಾಜುಗಳು

ಕೃತಿ : **ತುಳುನಾಡವರ ಸಮಾಜ**
ಬೆಲೆ : 115 ರೂಪಾಯಿ
ಕೃತಿಕಾರರು : ಬಿ. ಸಚ್ಚಿದಾನಂದ ಹೆಗ್ಡೆ
ಪ್ರಕಾಶನ ಕೌಸ್ತುಭ ಪ್ರಕಾಶನ, ಬೆಂಗಳೂರು
ಕೃತಿಕಾರರ ವಿಳಾಸ : ಸಂಪ್ರೀತ್,
ಅಂಬಲಪಾಡಿ, ಉಡುಪಿ - 576103

ತುಳುನಾಡವರ ಸಮಾಜ ಕೆ. ಸಚ್ಚಿದಾನಂದ ಹೆಗ್ಡೆಯವರ, ಕೌಸ್ತುಭ ಪ್ರಕಾಶನ ಬೆಂಗಳೂರು ಇವರ ಪ್ರಕಾಶನದಲ್ಲಿ ಪ್ರಕಟಗೊಂಡಿರುವ ಕೃತಿ. ಇನ್ನೂರ ಇಪ್ಪತ್ತಾರು ಪುಟಗಳಲ್ಲಿ ಅನಾವರಣಗೊಂಡಿರುವ ಈ ಕೃತಿಯಲ್ಲಿ ಆರು ಅಧ್ಯಾಯಗಳಿದ್ದು ಇಲ್ಲಿ ತುಳುನಾಡಿನ ಪ್ರಾಚೀನ ಹಿಂದೂ ಸಮಾಜದಿಂದ ತೊಡಗಿ ಇಲ್ಲಿಯ ಜಾತಿ ವ್ಯವಸ್ಥೆ, ಬ್ರಾಹ್ಮಣ ವರ್ಗ, ಒಕ್ಕಲಿಗರು, ಧರ್ಮ ಪಂಥಗಳು. ಇಲ್ಲಿಯ ತುಳು ನಾಡವರ ರೀತಿ ರಿವಾಜುಗಳನ್ನು ಲೇಖಕರು ಸಂಶೋಧನಾತ್ಮಕವಾಗಿ ಬರೆದಿದ್ದಾರೆನ್ನುವುದು ನಾವು ಕೃತಿಯನ್ನು ಓದುತ್ತಾ ಹೋದಂತೆ ನಮ್ಮ ಅರಿವಿಗೆ ಬಂದೇ ಬರುತ್ತದೆ.

ಬಾಲ್ಯದಿಂದಲೂ ಸಾಹಿತ್ಯಾಸಕ್ತಿಯನ್ನು ಬೆಳೆಸಿಕೊಂಡು ಬಂದಿರುವ ಹೆಗ್ಡೆಯವರು ಭಾರತೀಯ ವಿಮಾ ನಿಗಮದ ಡಿವಿಜಿನಲ್ ಮೆನೇಜರ್ ಆಗಿದ್ದು ನಿವೃತ್ತಿ ಪಡೆದವರು. ತಮ್ಮ ವೃತ್ತಿ ಜೀವನಕ್ಕೆ ಸಂಬಂಧ ಪಟ್ಟಂತೆ ಅವರು ಬರೆದಿರುವ 'ವಿಮಾ ಮಾರಾಟ ತಂತ್ರ' ಮನೋಧರ್ಮ ಪರಿವರ್ತನೆ ಸಾಮರ್ಥ್ಯ ವಿಕಸನ ಅಲ್ಲದೆ ಆಂಗ್ಲ ಭಾಷೆಯಲ್ಲಿ ಬರೆದಿರುವ 'Business Behaviour' ಇವರಿಗೆ ಬಹಳ ಹೆಸರು ತಂದಿತ್ತಿವೆ. ಸ್ನಾತಕೋತ್ತರ ಪದವಿ ಪಡೆದಿರುವ ಇವರು ನ್ಯಾಯವಾದಿಗಳಾಗಿ, ಅನೇಕ ಸಂಸ್ಥೆಗಳಿಗೆ ಸಂಪನ್ಮೂಲ ಶಕ್ತಿಯಾಗಿಯಲ್ಲದೆ ಚೆಸ್ ಆಟಗಾರರಾಗಿ, ಲೇಖಕರಾಗಿಯೂ ಪ್ರಸಿದ್ಧರು.

**✍ ಡಾ. ಕರುಣಾಕರ್ ಎನ್. ಶೆಟ್ಟಿ, ಪಣಿಯೂರ್**

ಈ ಸಂಶೋಧನಾ ಗ್ರಂಥದಲ್ಲಿ ಸಮಾಜಶಾಸ್ತ್ರ, ಸಾಮಾಜಿಕ ಮಾನವ ಶಾಸ್ತ್ರ ಹಾಗೂ ಸಾಂಸ್ಕೃತಿಕ ಮಾನವ ಶಾಸ್ತ್ರ ಹಾಗೂ ಸಮಾಜ ವಿಜ್ಞಾನಕ್ಕೆ ಸಂಬಂಧಪಟ್ಟ ವಿಷಯಗಳಿವೆ. ಸಮಾಜವೆನ್ನುವ ಶಬ್ಧ ಒಂದು ವಿಶಾಲ ಅರ್ಥವುಳ್ಳ ಶಬ್ದ. ಆದರೆ ಈ ತುಳುನಾಡವ ಸಮಾಜ ಕೃತಿಯಲ್ಲಿ ಅದನ್ನು ತುಳುನಾಡಿವರ ಸಮಾಜ ಸಂಸ್ಕೃತಿಗಳಿಗಷ್ಟೆ ಈಸಮಿತಗೊಳಿಸಿದ್ದಾರೆ. ತುಳುನಾಡ ಜನರ ಜ್ಞಾನ ನಂಬಿಕೆ, ಕಲೆ, ಕಾನೂನು ಪದ್ಧತಿ ಹಾಗೂ ಅಬ್ಯಾಸಗಳನ್ನು ಇಲ್ಲಿ ವೈಜ್ಞಾನಿಕ ನೆಲೆಯಲ್ಲಿ ಲಭ್ಯಸಿರಲಾಗಿದೆ. ಮಾನವನ ಬದುಕು ಅವರ ವ್ಯವಹಾರ ವೈವಿಧ್ಯಗಳ ಶೋಧ ಇಲ್ಲ. ನಡೆಸಿಕೊಟ್ಟಿರುವುದು ಈ ಕೃತಿಯ ಹೆಚ್ಚುಗಾರಿಕೆಯಾಗಿದೆ ತುಳುನಾಡಿನ ಜಾತಿ ವ್ಯವಸ್ಥೆ, ಸಂಪ್ರದಾಯ, ರೀತಿ ರಿವಾಜುಗಳ ಮೇಲೆ ಇಲ್ಲಿ ಬೆಳಕು ಚೆಲ್ಲಲಾಗಿದೆ.

ಸಮಾಜ ಸಾಮಾಜಿಕ ಸಂಬಂದಗಳ ಬಲೆಯಾದರೂ ಅದು ಪರಿವರ್ತನ ಶೀಲವಾಗಿದ್ದು ವಂಶಪಾರಂಪರ್ಯವಾಗಿ ಬರುವಂತದ್ದು. ಇದು ಸಾಮಾಜಿಕ ಸಂಪ್ರದಾಯಗಳಿಂದ, ಅವರು ಆಚರಿಸುವ ಆಚರಣೆಗಳಿಂದ ತೆರೆದುಕೊಳ್ಳುತ್ತದೆ. ಈ ಕೃತಿಯಲ್ಲಿ 'ಸಂಸ್ಕೃತಿ' ಪದ ಸಂಪೂರ್ಣ ತುಳುನಾಡಿನ ಜೀವನ ಕ್ಷೇತ್ರವನ್ನು ಆವರಿಸಿರುವುದನ್ನು ನಾವು ಕಾಣುತ್ತೇವೆ.

ಈ ಗ್ರಂಥದಲ್ಲಿ ತುಳುನಾಡವರ ಸಮಾಜದ ಸಮಗ್ರ ಜನಜೀವನ ವಿಧಾನವನ್ನು ಅವರು ಅನುಸರಿಸಿಕೊಂಡು ಬರುವ ಸಂಸ್ಕೃತಿಯನ್ನು ನಡವಳಿಕೆಯನ್ನು ಲೇಖಕರು ವೈಜ್ಞಾನಿಕ ನೆಲೆಗಟ್ಟಿನಲ್ಲಿ ಶೋಧ ನಡೆಸಿ ಬರೆದಿದ್ದಾರೆ. ತುಳುನಾಡವರ ಸಮಾಜದ ಪರಂಪರೆ, ಅಲ್ಲಿಯ ಸಾಂಸ್ಕೃತಿಕ ಭಂಡಾರದ ಶ್ರೀಮಂತಿಕೆ, ಸಮಾಜ ಪರಂಪರೆ ಇವೆಲ್ಲವನ್ನು ಈ ಕೃತಿಗೆ ತಳಹದಿಯಾಗಿ ಹಿಂದಿನ ಇತಿಹಾಸಕಾರರ ಬರಹಗಳನ್ನು ತಾನು ಸ್ವೀಕರಿಸಿದ್ದೇನೆಂದು ಲೇಖಖರ ಒಂದೆಡೆ ಹೇಳಿದ್ದರೂ, ಅದರ ವಿಷಯ ಸೂಚಿ ಎಲ್ಲಿಯೂ ನಮೂದಿಸಿಲ್ಲ.

ತುಳು ನಾಡವರ ಬಗ್ಗೆ ಹೆಚ್ಚಿನ ಒತ್ತುಕೊಟ್ಟು ಈ ಕೃತಿ ಬರೆದಿರುವುದರಿಂದ ಇನ್ನೂ ಹೆಚ್ಚಿನ ಸಮಗ್ರ ಅಧ್ಯಯನ ಇಲ್ಲಿ ನಡೆಸಬಹುದಾಗಿದೆ.

ತುಳುನಾಡಿನ ಆದಿ ದೇವನು ಶಿವನಲ್ಲ, ನಾಗಬೆರ್ಮೆರ ತುಳುವರು ಹಿಂದಿನಿಂದಲೂ ಆರಾಧಿಸಿಕೊಂಡು ಬಂದ ಮಹಾಶಕ್ತಿ. ಇದರ ಉಲ್ಲೇಖ ತುಳುನಾಡ ಸಿರಿ, ಕೋಟಿ ಚೆನ್ನಯರ ಪ್ರಸಂಗದಲ್ಲೂ ಬಂದಿದೆ. ಪುಟ 142. ಇದೇ ರೀತಿ ವಿವಾಹ ಸಮಾರಂಭ ಪುಟ 208ರಲ್ಲಿ ಮೃತರ ಮದುವೆ ಉಲ್ಲೇಖ, ಕರಪತ್ತಾವುನಿ, ಪುಟ 196 ಇಲ್ಲಿ ಮೈ ನೆರೆದ ಗಳಿಗೆ ಚೆನ್ನಾಗಿರದಿದ್ದರೆ ವೈಧವ್ಯ ಯೋಗ ಹೋಗಲಾಡಿಸಲು ಮರ ಅಥವಾ ಪ್ರಾಣಿಯ ಜೊತೆ ಮದುವೆ ಮಾಡಿಸಿ ಅದನ್ನು ಇಲ್ಲವಾಗಿಸಿ ವೈಧವ್ಯ ದೂರ ಓಡಿಸುವ ಕ್ರಮದ ಉಲ್ಲೇಖ ಬಂದಿಲ್ಲ. ಈ ಚಿಕ್ಕ ಪುಟ್ಟ ಕೊರತೆ ಬಿಟ್ಟರೆ ಈ ಕೃತಿ ತುಳುನಾಡವರ ಸಮಾಜ ಮತ್ತು ಸಂಸ್ಕೃತಿಯ ಕುರಿತು ಮಹತ್ವದ ವಿಚಾರಗಳನ್ನು ದಾಖಲಿಸಿದೆ. ಲೇಖಕರಿಗೆ ಅಭಿನಂದನೆಗಳು ಸಲ್ಲುತ್ತವೆ.

## ನತ ದೃಷ್ಟೆ

ಮಹಾಭಾರತ ಕಥೆಯ
ನತದೃಷ್ಟೆ, ನಾರಿಯಿವಳು
ಕಾಶಿರಾಜನ ಹಿರಿಯ ಪುತ್ರಿ 'ಅಂಬಾ'!
ಪ್ರೀತಿಸಿದ ತರುಣ ಶಾಲ್ವನಾಗಲೀ,
ಕೈಹಿಡಿದ ವಿಚಿತ್ರವೀರ್ಯನಾಗಲೀ,
ಸ್ವಯಂವರನ್ನು ಗೆದ್ದ ಭೀಷ್ಮನಾಗಲೀ,
ಒಬ್ಬರೂ ಇವಳನ್ನು ವರಿಸಲಿಲ್ಲ
ಇವರೆಲ್ಲರಿಗೂ ತಮ್ಮ - ತಮ್ಮ ಆದರ್ಶ,
ಆಚಾರ, ಪ್ರತಿಷ್ಠೆಗಳೇ ಪಧಾನವಾದವು!
ಜೀವಿತದ ಕೊನೆತನಕ ಕನ್ಯೆಯಾಗಿಯೇ
ಕಣ್ಣೀರ ಸುರಿಸಿದಳು, ಅಭಾಗಿನಿ ಅಂಬಾ!
ಭೀಷ್ಮನಿಗೆ ಇವಳದೊಂದು ಪ್ರಶ್ನೆ,
'ಆ ಜನ್ಮ ಬ್ರಹ್ಮಚಾರಿಯಾರುವೆನೆಂದು
ವೀರ ಪ್ರತಿಜ್ಞೆಗೈದ 'ಗಾಂಗೇಯ!'
ನನ್ನ ಸ್ವಯಂವರಕ್ಕೇಕೆ ಬಂದೆ?!
ಗೆದ್ದ ಕನ್ಯೆಯರನ್ನು ತಂದು, ನಿನ್ನ ಹೇಡಿ
ತಮ್ಮನಿಗೊಪ್ಪಿಸಿದೆ ಯಾಕೆ?!
ನೀನೊಬ್ಬ ಆದರ್ಶ ಪುರುಷ!
ಪಿತಾಮಹ, ವಿವೇಕಿ.. ಎಂದೆಲ್ಲಾ
ನಾ ಹೇಗೆ ಕರೆಯಲಿ?!
ಅವಳು ಪಟ್ಟ ನಾಯಿಪಾಡು
ಅವಳಿಗೂ ಈ ನೀತಿ ಕಲಿಸಿತು,
'ಮದುವೆಗೆ ಮುನ್ನ ಪ್ರೀತಿಸುವದ
ಕ್ಕಿಂತ ದೊಡ್ಡ ದುರಂತ ಬೇರೊಂದಿಲ್ಲ!'

*- ಕೆ.ಜಿ. ಭದ್ರಣ್ಣವರ, ಮುದ್ದೇಬಿಹಾಳ.*

# NAMES OF NITYA POOJA DETAILS FROM 01.12.2016 TO 31.12.2016

| Name | Day | Date of Pooja | Gotra | Nakshatra |
|---|---|---|---|---|
| S.V. Mohan N.S.<br>Shobith Gauranga Gupta | Thursday | December 3, 2016 | Kaushika<br>Uttarashada | Mulakula<br>Shravana |
| N.S. Chakrapani | Wednesday | December 9, 2016 | Gargheya | Anuradha |
| Girish H.S<br>Kantharaj K. | Thursday | December 10, 2016 | Jamadagni | Hasta |
| Madan Natu | Saturday | December 12, 2016 | Vashishta | Poorvabhadrapada |
| N. Sudarshan<br>Dr. H.S. Srinivas | Monday | December 14, 2016 | Moola Kula Vishaka | Hasta Ashwini |
| Smt. Geeta Vishwanath | Sunday | December 20, 2016 | | |
| Dr. B.R. Manjunath | Monday | December 21, 2016 | Shandilya | Poobha |
| Srinivas Murthy | Tuesday | December 22, 2016 | Shatabisha | Hasta |
| Shankarnarayan C.S. | Thursday | December 24, 2016 | Atresha | Dhanishta |
| A.K. Gaonkar | Tuesday | December 29, 2016 | | |
| Pramila Bellur | Thursday | December 31, 2016 | Kaundisa | Uttara |

## ಬ್ರೇಕಿಂಗ್ ನ್ಯೂಸ್ ... ಬ್ರೇಕಿಂಗ್ ನ್ಯೂಸ್ ... ಬ್ರೇಕಿಂಗ್ ನ್ಯೂಸ್...

## ಅತಿ ಶ್ರೀಘ್ರದಲ್ಲಿ ಸಮಸ್ತ ಕನ್ನಡಿಗರ ಕೈಸೇರಲಿದೆ. ನುಂಗಣ್ಣ ಆಯೋಗದ ವರದಿ

(ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯಲ್ಲಿ ನಡೆದಿದೆ ಎನ್ನಲಾದ 50 ಕೋಟಿ ರೂಪಾಯಿಗಳ ಅವ್ಯವಹಾರದ ಕುರಿತು ತನಿಖೆ ನಡೆಸಲು ನೇಮಿಸಲ್ಪಟ್ಟ ನುಂಗಣ್ಣ ಆಯೋಗವೇ 150 ಕೋಟಿ ರೂಪಾಯಿಗಳನ್ನು ಗುಳುಂ ಮಾಡಿರುವ ಬಗೆಗಿನ ವಿಸ್ತೃತ ವರದಿ).

ವರದಿ ಸಲ್ಲಿಸುವವರು : ಸೋಮನಾಥ ಎಸ್. ಕರ್ಕೇರ

ಪ್ಲಸ್:

● ಸಂಸಾರದಲ್ಲಿ ಸುಖವಾಗಿರಲು ಪರದಾಡುತ್ತಿರುವ ಮಿಸ್ಟರ್‌ಗಳಿಗೊಂದು ಮಾಸ್ಟರ್ ಕೀ ● "ಸುಖ ಸಂಸಾರಕ್ಕೆ ಕೆಲವು ಸೂತ್ರಗಳು"

● "ಹೆದ್ದಾರಿ" ಪತ್ರಿಕೆಯಲ್ಲಿ ಗ್ರೀನ್ ಸಿಗ್ನಲ್ ಪಡೆದುಕೊಂಡು ಪ್ರಕಟವಾದ ಕಳಪೆ ಕಾದಂಬರಿಯನ್ನು ದೂರಿ ಓದುಗರು ಸುರಿಸಿದ ಪತ್ರಗಳ ಸುರಿಮಳೆ – "ಲಾರಿ"

● ಗಂಡಂದಿರನ್ನು ಹದ್ದುಬಸ್ತಿನಲ್ಲಿರಿಸಿಕೊಳ್ಳಲು ಅವರ ಹೆಂಡತಿಯರು ಉಪಯೋಗಿಸುತ್ತಿರುವ ಪೊಲೀಸರ ಲಾಠಿಗಿಂತಲೂ ಪರಿಣಾಮಕಾರಿ ಅಸ್ತ್ರದ ಮಹಿಮೆಯನ್ನು ಮನದಟ್ಟು ಮಾಡಿಕೊಡುವ – "ಲಟ್ಟಣಿಗೆ"

● ನೂರು ಮಂದಿ ಹಿರಿ ಕಿರಿ ಕವಿಗಳನ್ನು ಒಂದೇ ವೇದಿಕೆಯಲ್ಲಿ ಕೂಡಿ ಹಾಕಿ ಇಂಟರ್‌ವಲ್ ಇಲ್ಲದೆ ಎಂಟು ತಾಸುಗಳ ತನಕ ಜರಗಿಸಲಾದ ಮ್ಯಾರಥಾನ್ ಕವಿ ಗೋಷ್ಠಿಯ ಸ್ವಾರಸ್ಯಕರ ವಿವರಗಳನ್ನೊಳಗೊಂಡ –"ಹೀಗೊಂದು ಸಾಹಿತ್ಯ ಸಮ್ಮೇಳನ"

● ತಲೆ ಇದ್ದೂ ಇಲ್ಲದವರಂತೆ ವರ್ತಿಸಿ ತಲೆಮಾರುಗಳಿಂದಲೂ ಇತರರ ತಲೆ ತಿನ್ನುತ್ತಾ ಬಂದವರ ಬಗ್ಗೆ ತಲೆ ಇರುವವರೆಲ್ಲಾ ತಿಳಿದುಕೊಳ್ಳಲೇಬೇಕಾದ ಸಂಗತಿ ● "ತಲೆ ಇಲ್ಲದವರು"

● 22ನೇ ಶತಮಾನದಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಲಿರುವ ಪತ್ರಿಕಾ ವರದಿಗಳನ್ನು 21ನೇ ಶತಮಾನದಲ್ಲೇ ಅಡ್ವಾನ್ಸಾಗಿ ಓದಿರಿ ● "22ನೇ ಶತಮಾನದಲ್ಲಿ"

● "ಮಾರ್ಗದ ಬದಿಯಲ್ಲಿ ಮರಗೆಣಸು ಮಾರುವ ಮಹಿಳೆ" ಮತ್ತು "ಗಂಡ ಹೇಳಿದಂತೆ ಕೇಳುವ ಹೆಂಡತಿ" ಮುಂತಾದ ಸ್ತ್ರೀ ಪರ ಕಾದಂಬರಿಗಳ ಮೂಲಕ ಸಾಹಿತ್ಯ ಲೋಕದಲ್ಲಿ ಹೊಸ ಸಂಚಲನ ಮೂಡಿಸಿರುವ ಲೇಖಕಿ ದೀಪಿಕಾ ಮಲಗುವಕೋಣೆ (ಪಡುಕೋಣೆ ಅಲ್ಲ) ಯವರ ನೂತನ ಕವನ ಸಂಕಲನದ ಕೃತಿ ಪರಿಚಯ ● 'ಒಗ್ಗರಣೆ'.

**ಬೋನಸ್ :–**

● ಜೀವನವಿಡೀ ಸನ್ಮಾನಕ್ಕಾಗಿ ಪರಿತಪಿಸಿ ನಿರಾಶರಾಗಿರುವ ಸನ್ಮಾನಪ್ರಿಯರಿಗೊಂದು ಸಂತಸದ ಸಂಗತಿ ● "ಸನ್ಮಾನ"

● ಸಾಹಿತ್ಯವಲಯದಲ್ಲಿ ಹಣ ಪಡೆದು ಹೊಸಬರ ಕೃತಿಗಳಿಗೆ ಮುನ್ನುಡಿ ಬರೆಯುವ ಹೊಸ ಬೆಳವಣಿಗೆ ಆಗಿದೆಯೇ? ಹಾಗಾದರೆ ಓದಿರಿ– "ಹೆರಿಗೆಗೂ ತೆರಿಗೆ".

ಈ ಮೇಲಿನ ಎಲ್ಲವನ್ನೂ ಹಾಗೂ ಇನ್ನೂ ಅನೇಕ ಹಾಸ್ಯ ಲೇಖನಗಳನ್ನೊಳಗೊಂಡ ಸೋಮನಾಥ ಕರ್ಕೇರರ "ನುಂಗಣ್ಣ ಆಯೋಗದ ವರದಿ" ಎಂಬ ಕೃತಿಯು ಶನಿವಾರ ತಾ. 17.12.2016 ರಂದು ಸಂಜೆ ಗಂಟೆ 5.00ಕ್ಕೆ ಮಾಟುಂಗಾದ ಮೈಸೂರು ಅಸೋಸಿಯೇಶನ್ ಕಿರು ಸಭಾಗೃಹದಲ್ಲಿ ಲೋಕಾರ್ಪಣೆಗೊಳ್ಳಲಿದೆ. ಇದಕ್ಕೆ ಎಚ್. ಡುಂಡಿರಾಜರ ಮುನ್ನುಡಿ ಇದೆ. ಡಾ। ಭರತ್‌ಕುಮಾರ್ ಪೊಲಿಪು ರವರ ಬೆನ್ನುಡಿ ಇದೆ.

**ವಿ.ಸೂ.**

1. ಯಾವುದೇ ಮಾನಸಿಕ ಒತ್ತಡವಿದ್ದರೂ ಅದನ್ನು ಹೊರಗೆ ಬಿಟ್ಟು ನಗುನಗುತ್ತ ಸಭಾಗೃಹವನ್ನು ಪ್ರವೇಶಿಸಬೇಕಾಗಿ ವಿನಂತಿ.
2. ಈ ಕೃತಿಯನ್ನು ಓದುತ್ತಾ ನಕ್ಕು ನಕ್ಕು ನಿಮ್ಮ ಹೊಟ್ಟೆ ಹುಣ್ಣಾದರೆ ಅದಕ್ಕೆ ಲೇಖಕರು ಜವಾಬ್ದಾರರಲ್ಲ. ಆದರೆ ಸೂಕ್ತ ದಾಖಲೆಗಳನ್ನು ಸಲ್ಲಿಸಿದಲ್ಲಿ ಅದಕ್ಕಾಗಿ ಮಾಡಲಾದ ವೈದ್ಯಕೀಯ ವೆಚ್ಚದ 50% ನ್ನು ಮರುಪಾವತಿಸಲಾಗುತ್ತದೆ.
3. ನೀವು ಖರೀದಿಸಿ ಓದಿದ ಬಳಿಕ ಈ ಕೃತಿಯು ನಿಮಗೆ ಮೆಚ್ಚುಗೆಯಾಗದಿದ್ದರೆ ನೀವು ಕೊಟ್ಟ ಹಣವನ್ನು ಕುಕಿಂಗ್ ಗ್ಯಾಸ್ ಸಬ್ಸಿಡಿಯಂತೆ ನೇರವಾಗಿ ನಿಮ್ಮ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕ: 9819321186 (ಸೋಮನಾಥ ಎಸ್. ಕರ್ಕೇರ), 9960215897 (ಪುರಂದರ ಸಾಲ್ಯಾನ್) 9004295211 (ರಜನಿ ಪೈ)

# ಶೋಭಾ ಪ್ರಮೋದ್ ಅವರ ಕುಹೂಕುಹೂ

ದೂರದ ಕಾಡಿನಲ್ಲಿ ಹಾಡುಹಕ್ಕಿಯೊಂದು ಹಾಡುತ್ತಿದೆ. ಆ ಹಾಡಿನ್ನು ಆಲಿಸುವವರಿದ್ದಾರೆಯೇ ಹೊರತು ಕೋಗಿಲೆಯನ್ನು ಗುರುತಿಸುವವರಿಲ್ಲ. ಆದರೆ ಇಲ್ಲೊಬ್ಬರು ಅಂತಹ ಹಾಡುಹಕ್ಕಿಯನ್ನು ಗುರುತಿಸಿದ್ದಾರೆ. ಅವರೇ ನಮ್ಮ ಬಿ.ಎಸ್.ಕುರ್ಕಾಲರು. ಎಂದೂ ಕಂಡರಿಯದವರನ್ನು, ಬೇರೆ ಬೇರೆ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿರುವ ಬರಹಗಳನ್ನು ಓದಿ, ಮೆಚ್ಚಿ ಆ ಮೂಲಕ ಗುರುತಿಸಿಕೊಂಡು ಇದೀಗ ಅವರ ಕವನಗಳನ್ನು ಕೃತಿರೂಪದಲ್ಲಿ ಹೊರತರುವುದು ನಿಜಕ್ಕೂ ಮೆಚ್ಚತಕ್ಕ ಸಂಗತಿ.

ಶೋಭಾ ಪ್ರಮೋದ್ ಅವರು ಕವನ, ಹನಿಗವನ, ಹಾಸ್ಯಲೇಖನ, ಲಲಿತ ಪ್ರಬಂಧಗಳನ್ನು ಆಗಾಗ ಹೊಸದಿಗಂತ, ತರಂಗ, ಉದಯವಾಣಿ, ತುಷಾರ, ಕರ್ನಾಟಕ ಮಲ್ಲ, ವಿಜಯವಾಣಿ ಮೊದಲಾದ ಪತ್ರಿಕೆಗಳಲ್ಲಿ ಪ್ರಕಟಿಸುತ್ತಲೇ ಬಂದಿದ್ದಾರೆ. ಯಾವುದೇ ಪ್ರಚಾರ, ಪ್ರಸಾರದ ಆಸೆಯಿಂದ ಬರೆಯುವವರು ಇವರಲ್ಲ. ತನ್ನ ಮನ ಸಂತೋಷಕ್ಕಾಗಿ ಬರೆದು ಅದನ್ನು ಪ್ರಕಟಿಸುತ್ತಿದ್ದಾರೆ.

'ಕಾಡಿನಲ್ಲಿ ಕುಹೂ ಕುಹೂ' ಎಂಬ ಸುಂದರವಾದ ಶೀರ್ಷಿಕೆಯನ್ನು ಹೊಂದಿರುವ ಈ ಕವನ ಸಂಕಲನ ಶೋಭಾ ಪ್ರಮೋದ್ ಅವರ ಚೊಚ್ಚಲ ಕೃತಿ. ಈ ಪುಸ್ತಕ 43 ಕವನಗಳು, ಕೆಲವು ಚುಟುಕುಗಳನ್ನು ತನ್ನ ಒಡಲಾಳದಲ್ಲಿ ಹೊತ್ತುಕೊಂಡು ಸಂಭ್ರಮಿಸುತ್ತಿದೆ. ಕನಸು ಕಾಣದ ಮನುಷ್ಯನಿಲ್ಲ ಎನ್ನಬಹುದು. ಸುಂದರ ಕನಸುಗಳನ್ನು ಕಾಣುತ್ತಾ ಹೋಗುವ ಕವಿ ಕೊನೆಗೆ ಕನಸುಗಳ ತೆರೆ ತೆರೆದು ನೋಡಿದಾಗ ಅಸಹಾಕಯಕತೆ ಮೈಸುಟ್ಟು ಆ ಬಿಸಿ ಝಳಕ್ಕೆ ಕನಸುಗಳೆಲ್ಲ ಸಾಯುತ್ತವೆ ಎಂದು ನಿರಾಶೆಯನ್ನು ಹೊಂದುತ್ತಾರೆ. ಎಲ್ಲೋ ಒಂದು ಕಡೆ ತನ್ನ ಜೀವನದಲ್ಲಿ ಆಳವಾಗಿ ಬೇರೂರಿನ ನಿರಾಶಾವಾದ ಅವರ ಕವನಗಳಲ್ಲಿ ಎದ್ದು ಕಾಣುತ್ತವೆ. ಅಂತಹದ್ದೇ ಇನ್ನೊಂದು ಕವನ ನನ್ನ ಸ್ವಾತಂತ್ರ್ಯ. ದೇಶದ ರಾಶಿ ಭವಿಷ್ಯದ ಹಾಗೆ ತನ್ನ ಬಾಳಿನ ಕನ್ನಡಿಯೂ ಚೂರಾಗಿದೆ ಎನ್ನುವಲ್ಲಿ ನೋವಿನ ಛಾಯೆಯನ್ನು ಓದುಗ ಗುರುತಿಸಿಬಹುದು. ಬದುಕಿನ ಅನುಭವವೇ ಕವಿಯೊಬ್ಬನ ದೊಡ್ಡ ಬಂಡವಾಳ. ಬದುಕನ್ನರಿಯದವನ ಕಲಾಭಿವ್ಯಕ್ತಿಯಲ್ಲಿ ತನ್ನತನ ಮೂಡಲಾರದೇ ಅದು ಆರ್ಟಿಫೀಶಿಯಲ್ ಹೂವಿನ ಹಾಗೆ. ಸುಮಧುರತೆಯಿಲ್ಲದ ಸುವಾಸನಾರಹಿತವಾದ ಹೂವಿನಂತೆ.

ಶೋಭಾ ಪ್ರಮೋದ್ ಅವರ ಕವನಗಳನ್ನು ಓದುವಾಗ ಒಡದೆ ಮನಸು ಒಂದು ಕ್ಷಣ ನಿಲ್ಲುತ್ತದೆ. ಈ ಸಾಲುಗಳು ಯಾಕೆ ಬಂದಿರಬಹುದು? ಈ ಪದವನ್ನು ಕವಿ ಯಾವ ಸಂದರ್ಭದಲ್ಲಿ ಬಳಸಿಕೊಂಡಿರಬಹುದು ಎಂಡು ನಾವು ಯೋಚಿಸುವಂತೆ ಮಾಡುತ್ತದೆ. ನಾವೆಷ್ಟೇ ಬದುಕಿನ ಜಂಜಾಟದಲ್ಲಿ ಸಿಲುಕಿ ಒದ್ದಾಡುತ್ತಿದ್ದರೂ ನಮ್ಮೊಳಗೆ ಹುದುಗಿರುವ, ಅವಿತಿರುವ ಪ್ರತಿಭೆ ನಮ್ಮನ್ನು ಬದುಕಿಸುತ್ತದೆ ಎನ್ನುವುದಕ್ಕೆ ಶೋಭಾ ಪ್ರಮೋದ್ ಅವರ ಕವನಗಳೇ ಸಾಕ್ಷಿ. ಒಮ್ಮೊಮ್ಮೆ ನಾವ್ಯಾಕೆ ಬರೆಯುತ್ತೇವೆ ಎಂದು ಯೋಚಿಸುವುದಿದೆ. ಇಲ್ಲಿ ಶೋಭಾ ಪ್ರಮೋದ್ ಬಹಳ ಸುಂದರವಾಗಿ 'ಕವಿತೆ ನನ್ನನ್ನು ಬದುಕಿಸುತ್ತದೆ' ಎಂದು ತಾನು ಬರೆಯುವ ಕವಿತೆ ನನಗಾಗಿಯೇ ಹೊರತು ಅನ್ಯರ ಬಾಳನ್ನು ಅರಳಿಸುವುದಕ್ಕಲ್ಲ ಎಂದು ದಿಟ್ಟತನದ ಉತ್ತರವನ್ನು ತಮ್ಮ ಕವಿತೆಯ ಮೂಲಕ ನೀಡುತ್ತಾರೆ.

ಜಾತಿ ಮತ ಭೇದದಿಂದ ಹೊಡೆದಾಡುವ ನಾವು ನಮ್ಮ ಬಾಲ್ಯದಲ್ಲಿ ನಮ್ಮ ಮನೆ, ಶಾಲೆ, ಸುತ್ತಮುತ್ತಲಿನ ಪರಿಸರದಲ್ಲಿಯೇ ಮೊಳಕೆಯೊಡೆದ ಈ ಜಾತಿ ವ್ಯವಸ್ಥೆ ಮುಗ್ದ ಮನಸಿನಲ್ಲಿ ಅಚ್ಚೊತ್ತಿರುವಾಗ ಅದನ್ನು ಸುಲಭದಲ್ಲಿ ಹೋಗಲಾಡಿಸುವುದು ಸಾಧ್ಯವೇ? ಜಾತಿ ವ್ಯವಸ್ಥೆಗೇ ತೊನ್ನು ಹಿಡಿದಿರುವಾಗ ಯಾರನ್ನು ದೂರಲಿ ಸ್ವಾಮಿ? ಎಂದು 'ಪಾಪಪ್ರಜ್ಞೆ' ಕವನದಲ್ಲಿ ಮಾರ್ಮಿಕವಾಗಿ ಪ್ರಶ್ನಿಸಿದ್ದಾರೆ.

ಶೋಭಾ ಪ್ರಮೋದ್ ಅವರ 'ಕೋರಿಕೆ' ಕವನ ನಮ್ಮನ್ನು ಬಡಿದೆಬ್ಬಿಸುತ್ತದೆ. ಕಣ್ಣಿಗೆ ಸುಂದರವಾಗಿ ಕಾಣುವ ವಸ್ತುಗಳು, ಸುಖ ಭೋಗದ ಜೀವನವನ್ನು ವೈಭವೀಕರಿಸದೆ ಜೋಪಡ ಪಟ್ಟಿಯಲ್ಲಿ ಎಲುಬು ಹಂದರವಾಗಿರುವ, ಅನ್ನದ ಗೋಳು ಏನೆಂದು ತಿಳಿದ ಬಡವರನ್ನು ಕೇಳು ಎನ್ನುವ ಕವನದ ಈ ಸಾಲುಗಳು ಗಮನ ಸೆಳೆಯುತ್ತವೆ.

ಟಿ.ವಿ., ಫ್ರಿಜ್ಜು, ವಿಡಿಯೋ ಕ್ಯಾಮರಾ
ಗಗನಚುಂಬಿ ವೈಭವ ಕವನವಾಗಿಸದಿರು
ನೋಡು ಜೋಪಡ ಪಟ್ಟಿಯ ಎಲುಬು ಹಂದರ
ಕೇಳು ಅನ್ನದ ಗೋಳಿನ ಬಡ ಬಾಂಧವರ"

ಕಣ್ಮುಚ್ಚಿ ಪ್ರೇಮಗೀತೆಗಳ ಗುನುಗುಣಿಸುವ ಭಾವಜೀವಿಯಾಗದೇ ಕಟು ವಾಸ್ತವ ಎದುರಿಸಲು ಸಜ್ಜಾಗು ಎಂದು ಅವರು ಓದುಗನನ್ನು ಕೋರಿಕೊಳ್ಳುತ್ತಾರೆ. ನಮ್ಮಲ್ಲಿನ ಬಡವರ ನೋವು ಏನು ಎನ್ನುವುದರ ಮೇಲೆ ಈ ಕವನದ ಮೂಲಕ ಬೆಳಕು ಚೆಲ್ಲಿದ್ದಾರೆ.

ಜೀವನದಲ್ಲಿ ಬರುವ ಕಷ್ಟ ನಷ್ಟಗಳು, ದು:ಖ ದುಮ್ಮಾನಗಳು ಲೆಕ್ಕವಿಲ್ಲದಷ್ಟು, ಅವೆಲ್ಲವುಗಳ ನಡುವೆಯೂ ಕವಿಯೊಬ್ಬನನ್ನು ಬದುಕಿಸುವುದು ಆತನ ಕವಿತ್ವ ಶಕ್ತಿಯೊಂದೇ. ಅದನ್ನೆ 'ಅಂದುಕೊಂಡಿರಲಿಲ್ಲ' ಕವನ ಹೇಳುತ್ತದೆ. ನೆನಪ ತರಗೆಲೆ ಚೆಲ್ಲಿದಾತ ದೂರವಾಗುತ್ತಾನೆ, ಒಲವಿನ ಮಾತಿನ ಮೋಡಿ ಮಾಡಿಕಿರುದ್ವಾರದೈ ಹಾರಿ ಹೋದ ಇನಿಯನಿದ್ದಾನೆ, ತನ್ನ ಎಲ್ಲ ನೋವೆಂಬ ಅಂಗೈ ಹುಣ್ಣಿಗೆ ಮತ್ತಷ್ಟು ಬಿಸಿ ಎಣ್ಣೆ ಚೆಲ್ಲಿ ಉರಿಯನ್ನು ಹೆಚ್ಚಿಸುವವರಿದ್ದಾರೆ.. ಆದರೆ ಕೊನೆಗೆ ಬದುಕಿಸಿದ್ದು ನನ್ನೊಳಗಿನ ಕವಿ ಎಂದು ನಾ ಅಂದುಕೊಂಡಿರಲಿಲ್ಲ. ಹಾಗಿದ್ದರೆ ಸಾಹಿತ್ಯವನ್ನು ತನ್ನ ಒಡಲೊಳಗಿಟ್ಟು ಪೂಜಿಸುವವನೇ ನಿಜವಾದ ಸುಖಿಯಲ್ಲವೇ?

ಮನುಷ್ಯನಾಗಿ ಹುಟ್ಟಿದ ಮೇಲೆ ಕೇವಲ ಅವನು ಉಸಿರಾಡುತ್ತಿರುವುದರಲ್ಲಿ ಅವನ ಜೀವಂತಿಕೆಯನ್ನು ಗುರುತಿಸುವುದಕ್ಕಾಗುವುದಿಲ್ಲ. ಅವನ ಮಟ್ಟಿಗೆ ಜೀವಂತಿಕೆ ಎಂದರೆ ಚೈತನ್ಯದಿಂದಿರುವುದು, ಪ್ರಜ್ಞಾವಂತನಾಗಿರುವುದು, ಸಂವೇದನಾಶೀಲನಾಗಿರುವುದು. ನಮ್ಮ ಸುತ್ತಮುತ್ತಲಿನ ಆಗುಹೋಗುಗಳಿಗೆ ಕ್ರಿಯಾತ್ಮಕವಾಗಿ ಸ್ಪಂದಿಸುವುದು. ಅಂತಹ ಸ್ಪಂದನವನ್ನು ನಾವು ಇಲ್ಲಿನ ಕೆಲವು ಕವಿತೆಗಳಲ್ಲಿ ನೋಡಬಹುದು. ದಿನಚರಿಯ ಪುಟ, ಶಕುಂತಳೆಯ ಬಿಕ್ಕಳಿಕೆ, ಅಜ್ಜಿಯ ಸೀರೆ, ವಾಸ್ತವದ ಚಿತ್ರ ಮೊದಲಾದ ಕವನಗಳು ನೈಜತೆಗೆ ಹಿಡಿದ ಕನ್ನಡಿಗಳು.

ಶೋಭಾ ಪ್ರಮೋದ್ ಅವರ ಕೆಲವು ಚುಟುಕುಗಳನ್ನು ಕೂಡಾ ಈ ಸಂಕಲನದಲ್ಲಿ ಸೇರಿಸಿರುವುದು ಕುರ್ಕಾಲರು ಅವರ ಒಟ್ಟು ಕಾವ್ಯಕ್ಕೆ ಒಂದೆಡೆ ನ್ಯಾಯ ದೊರಕಿಸುವ ಕೆಲಸ ಮಾಡಿದ್ದಾರೆ. ಗುಲ್ವಾಡಿಯ ಆಪ್ತರಾಗಿದ್ದ ಶೋಭಾ ಪ್ರಮೋದ್ ಅವರು ತೀರಿ ಹೋದಾಗ ಸಲ್ಲಿಸಿದ ನುದಿನಮನವೂ ಮನಸ್ಸನ್ನು ತಟ್ಟುತ್ತದೆ.

ಒಟ್ಟು ತನ್ನ ಸೃಜನಶೀಲ ಕಲೆಯಿಂದ ಸಮಾಜಕ್ಕೆ ಪ್ರೇರಣೆಯಾಗಬಲ್ಲ ಮಹಿಳೆ ಶೋಭಾಪ್ರಮೋದ್ ಅವರ ಕವನ ಸಂಕಲನ ಲೋಕಾರ್ಪಣೆಗೊಂಡಿರುವುದು ಸಂತಸದ ವಿಷಯ. ಅಜ್ಞಾತವಾಸದಂತೆ ಸಾಹಿತ್ಯಾಭಿಮಾನಿಗಳ ಸಂಪರ್ಕದಿಂದ ದೂರವೇ ಇದ್ದರು ತನ್ನ ಬರೆಹದ ಮೂಲಕ ಹತ್ತಿರವಾದವರು ಶೋಭಾ ಪ್ರಮೋದ್. ಅವರ ಈ ಕವನ ಸಂಕಲನವನ್ನು ಹೊರತಂದ ಬಿ.ಎಸ್.ಕುರ್ಕಾಲ್ ಅವರಿಗೂ, ಶೋಭಾ ಪ್ರಮೋದ್ ಅವರಿಗೂ ಅಂತರಾಳದ ಅಭಿನಂದನೆಗಳು.

ಡಾ. ಪೂರ್ಣಿಮಾ ಸುಧಾಕರ ಶೆಟ್ಟಿ

# ಚಂದ್ರಶೇಖರ ಪಾಲೆತ್ತಾಡಿ ಅಭಿನಂದನ ಸಮಿತಿ ಅಧ್ಯಕ್ಷರಾಗಿ ಐಕಳ ಹರೀಶ್ ಶೆಟ್ಟಿ ಆಯ್ಕೆ

ಖ್ಯಾತ ಪತ್ರಕರ್ತ, ಲೇಖಕ, ಕರ್ನಾಟಕ ಮಲ್ಲ ದೈನಿಕದ ಸಂಪಾದಕ ಚಂದ್ರಶೇಖರ ಪಾಲೆತ್ತಾಡಿ ಅಭಿನಂದನ ಸಮಿತಿಯ ಅಧ್ಯಕ್ಷರಾಗಿ ಹೆಸರಾಂತ ಸಂಘಟಕ, ಜಾಗತಿಕ ಬಂಟರ ಒಕ್ಕೂಟದ ಉಪಾಧ್ಯಕ್ಷ ರಾಜ್ಯೋತ್ಸವ ಪ್ರಶಸ್ತಿ ವಿಜೇತ ಉದ್ಯಮಿ, ಸಮಾಜ ಸೇವಕ ಐಕಳ ಹರೀಶ್ ಶೆಟ್ಟಿ ಅವರು ಸರ್ವಾನುಮತದಿಂದ ಆಯ್ಕೆಯಾಗಿದ್ದಾರೆ. ಮುಂಬೈ ಮಹಾನಗರದ ಪ್ರಸಿದ್ಧ ಕನ್ನಡ ದೈನಿಕ ಕರ್ನಾಟಕ ಮಲ್ಲ ಬೆಳ್ಳಿಹಬ್ಬದ ಸಂಭ್ರಮದಲ್ಲಿದ್ದು ಅದರ ಸಂಪಾದಕರಾಗಿ ಕಳೆದ 25 ವರ್ಷಗಳಿಂದ ಸೇವೆಗೈದ ಚಂದ್ರಶೇಖರ ಪಾಲೆತ್ತಾಡಿ ಅವರನ್ನು ಮುಂಬೈ ತುಳು–ಕನ್ನಡಿಗರ ಪರವಾಗಿ ಅಭಿನಂದಿಸುವ ಕಾರ್ಯಕ್ರಮವೊಂದನ್ನು 2017ರ ಮಾರ್ಚ್ ಮೊದಲ ವಾರದಲ್ಲಿ ಮುಂಬೈ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಆಶ್ರಯದಲ್ಲಿ ಆಯೋಜಿಸಲಾಗಿದ್ದು ಈ ಸಮಿತಿಯ ಉಪಾಧ್ಯಕ್ಷರಾಗಿ ಬಿಲ್ಲವ ಅಸೋಸಿಯೇಷನ್ನಿನ ಅಧ್ಯಕ್ಷ, ಸಂಘಟಕ ಹಿರಿಯ ಬ್ಯಾಂಕಿಂಗ್ ತಜ್ಞ, ನಿತ್ಯಾನಂದ ಕೋಟ್ಯಾನ್, ರಂಗತಜ್ಞ ಹಾಗೂ ಕರ್ನಾಟಕ ಸಂಘದ ಕಾರ್ಯದರ್ಶಿ ಡಾ. ಭರತ್‌ಕುಮಾರ್ ಪೊಲಿಪು, ಖ್ಯಾತ ಲೇಖಕ, ವಿಚಾರವಾದಿ ರವಿ. ರಾ. ಅಂಚನ್ ಅವರು ಆಯ್ಕೆ ಯಾಗಿದ್ದಾರೆ. ಈ ಅಭಿನಂದನ ಸಮಿತಿಯ ಕಾರ್ಯದರ್ಶಿಯಾಗಿ ಕವಿ, ಲೇಖಕ ಪೇತ್ರಿ ವಿಶ್ವನಾಥ ಶೆಟ್ಟಿ, ಕೋಶಾಧಿಕಾರಿಯಾಗಿ ಕರ್ನಾಟಕ ಜಾನಪದ ಪರಿಷತ್ತು ಮಹಾರಾಷ್ಟ್ರ ಘಟಕದ ಅಧ್ಯಕ್ಷ ಸುರೇಶ್ ಶೆಟ್ಟಿ ಯೆಯ್ಯಾಡಿ, ಸಭಾ ಕಾರ್ಯಕ್ರಮದ ಸಂಘಟಕರಾಗಿ ಗುರುದೇವ ಸೇವಾ ಬಳಗ ಒಡಿಯೂರು, ಮಹಾರಾಷ್ಟ್ರ ಘಟಕದ ಕಾರ್ಯದರ್ಶಿ, ಸಂಘಟಕ ಪೇಟೆಮನೆ ಪ್ರಕಾಶ್ ಶೆಟ್ಟಿ ಅವರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಗಿದೆ. ಪಾಲೆತ್ತಾಡಿ ಅವರ ಜೀವನ ಸಾಧನೆಯನ್ನು ಬಿಂಬಿಸುವ ಅಭಿನಂದನ ಗ್ರಂಥ 'ಆಪ್ತಮಿತ್ರ'ದ ಪ್ರಧಾನ ಸಂಪಾದಕರಾಗಿ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಜಿ.ಎನ್.ಉಪಾಧ್ಯ, ಸಂಪಾದಕರಾಗಿ ಕನ್ನಡ ವಿಭಾಗದ ಸಹಪ್ರಾಧ್ಯಾಪಕರಾದ ಡಾ. ಪೂರ್ಣಿಮಾ .ಎಸ್. ಶೆಟ್ಟಿ, ಸಾಂಸ್ಕೃತಿಕ ಕಾರ್ಯಕ್ರಮದ ಸಂಯೋಜಕರಾಗಿ ಕಲಾಸೌರಭದ ನಿರ್ದೇಶಕ, ಕಲಾವಿದ ಪದ್ಮನಾಭ ಸಸಿಹಿತ್ಲು ಅವರು ಕಾರ್ಯನಿರ್ವಹಿಸಲಿದ್ದಾರೆ. ಅಭಿನಂದನ ಸಮಿತಿಯ ಸದಸ್ಯರಾಗಿ ಸಾಹಿತಿ, ಪತ್ರಕರ್ತ ಶ್ರೀನಿವಾಸ ಜೋಕಟ್ಟೆ, ಅಕ್ಷಯ ಮಾಸಿಕದ ಸಂಪಾದಕ ಡಾ. ಈಶ್ವರ ಅಲೆವೂರು, ಸಂಘಟಕ ಡಾ. ಶಿವಮೂಡಿಗೆರೆ, ಮೊಗವೀರದ ಸಂಪಾದಕ ಅಶೋಕ ಸುವರ್ಣ, ಅಂಕಣಕಾರ ಶ್ರೀಧರ ಉಚ್ಚಿಲ್, ಬಂಟರ ಸಂಘದ ಮಹಿಳಾ ವಿಭಾಗದ ಕಾರ್ಯಾಧ್ಯಕ್ಷೆ ಲತಾ ಜಯರಾಮ ಶೆಟ್ಟಿ, ಭಾರತಿ ಉಮೇಶ್ ಕೋಟ್ಯಾನ್ ಅವರನ್ನು ಒಳ ಗೊಂಡ ಸಮಿತಿಯೊಂದನ್ನು ಆಯ್ಕೆ ಮಾಡಲಾಗಿದೆ. ಇದೇ ಸಂದರ್ಭ ದಲ್ಲಿ ಚಂದ್ರಶೇಖರ ಪಾಲೆತ್ತಾಡಿ ಅವರಿಗೆ ಹಮ್ಮಿಣಿಯೊಂದನ್ನು ಅರ್ಪಿಸಲು ನಿರ್ಧರಿಸಲಾಗಿದೆ. ಈ ಕಾರ್ಯಕ್ರಮದ ಪ್ರಾಯೋಜಕತ್ವ ನೀಡಿ ಸಹಕರಿಸಬಯಸುವವರು ಕಾರ್ಯದರ್ಶಿ ಪೇತ್ರಿ ವಿಶ್ವನಾಥ ಶೆಟ್ಟಿ (9892602314), ಕೋಶಾಧಿಕಾರಿ ಸುರೇಶ್ ಶೆಟ್ಟಿ ಯೆಯ್ಯಾಡಿ (9892169914) ಅವರನ್ನು ಸಂಪರ್ಕಿಸಬಹುದಾಗಿದೆ

ಚಂದ್ರಶೇಖರ ಪಾಲೆತ್ತಾಡಿ:– ಮುಂಬೈ ಕನ್ನಡಿಗರ ಪ್ರೀತ್ಯಾದರಗಳಿಗೆ ಪಾತ್ರರಾಗಿರುವ ಚಂದ್ರಶೇಖರ ಪಾಲೆತ್ತಾಡಿ ಅವರು ಪತ್ರಕರ್ತರಾಗಿ, ಚಿಂತಕರಾಗಿ ಹೆಸರು ಮಾಡಿದ್ದಾರೆ. 'ಹೊಸದಿಗಂತ' ದೈನಿಕದ ಮೂಲಕ ಪತ್ರಿಕಾರಂಗಕ್ಕೆ ಇಳಿದ ಪಾಲೆತ್ತಾಡಿ ಅವರು ಕರ್ನಾಟಕ ಮಲ್ಲವನ್ನು ಕಟ್ಟಿ ಬೆಳೆಸಿದವರು. ಬೀದಿ ನಾಟಕ, ವಿದ್ಯಾರ್ಥಿ, ರೈತ ಮತ್ತು ಕಾರ್ಮಿಕ ಚಳುವಳಿಯಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಪಾಲೆತ್ತಾಡಿಯವರು ದಕ್ಷಿಣ ಕನ್ನಡ ಜಿಲ್ಲಾ ಸಾಕ್ಷರತಾ ಆಂದೋಲನದಲ್ಲೂ ಸಕ್ರಿಯವಾಗಿ ಪಾಲ್ಗೊಂಡವರು.

ನೇರ ನಡೆನುಡಿಗೆ ಹೆಸರಾಗಿರುವ ಅವರದು ಸರಳ ಸಜ್ಜನಿಕೆಯ ವ್ಯಕ್ತಿತ್ವ. ಹಿತಮಿತ ಮೃದು ವಚನದ ಚಂದ್ರಶೇಖರ ಪಾಲೆತ್ತಾಡಿ ಅವರ ಬರವಣಿಗೆ ಅಷ್ಟೇ ಸೂಕ್ಷ್ಮವೂ ಖಾರವೂ ಆಗಿರುತ್ತದೆ. ಕರ್ನಾಟಕ ಮಲ್ಲದಲ್ಲಿ ಕಳೆದ 15 ವರ್ಷಗಳಿಂದ ಅವರು ಬರೆಯುತ್ತಿರುವ 'ಇದು ಭಾರತ' ಅಂಕಣ ಸಾಕಷ್ಟು ಜನಪ್ರಿಯವಾಗಿದೆ.

ಮಂಗಳೂರಿನಲ್ಲಿ ತಮ್ಮ ಪತ್ರಿಕೋದ್ಯಮದ ಆರಂಭದ ದಿನಗಳನ್ನು ಕಳೆದ ಅವರು ಅಲ್ಲಿ 'ಮಂಗಳೂರು ಮಿತ್ರ' ಹೊಸದಿಗಂತ ಪತ್ರಿಕೆಯಲ್ಲಿಯೂ ಸೇವೆ ಸಲ್ಲಿಸಿದರು. ಮುಂಬೈನ ಉದಯದೀಪ ದೈನಿಕದಲ್ಲಿಯೂ ಅವರು ಕೆಲಕಾಲ ಕಾರ್ಯನಿರ್ವಹಿಸಿದ್ದರು. ಕನ್ನಡ ತುಳು ಸಾಹಿತ್ಯ ಸಂಸ್ಕೃತಿಯ ಕುರಿತು ವಿಶೇಷ ಆಸ್ಥೆಯನ್ನು ಹೊಂದಿರುವ ಅವರು ತಮ್ಮ ಬರವಣಿಗೆಯ ಮೂಲಕ ಮುಂಬೈ ಕನ್ನಡಿಗರ ಪ್ರೀತಿ ವಿಶ್ವಾಸಕ್ಕೆ ಪಾತ್ರರಾಗಿದ್ದಾರೆ. ವರ್ತಮಾನದ ಎಲ್ಲ ಆಗುಹೋಗುಗಳಿಗೆ ತೀವ್ರವಾಗಿ ಸಮಚಿತ್ತದಿಂದ ಸ್ಪಂದಿಸಬಲ್ಲ ಅಪರೂಪದ ಪತ್ರಕರ್ತರೂ ಹೌದು. ಅನೇಕ ಸಂಘ ಸಂಸ್ಥೆಗಳು ಪಾಲೆತ್ತಾಡಿ ಅವರ ಸಾಧನೆಯನ್ನು ಗುರುತಿಸಿ ಗೌರವಿಸಿದೆ. ಮಹಾರಾಷ್ಟ್ರ ರಾಜ್ಯ ಪತ್ರಕರ್ತರ ಸಂಘದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿರುವ ಪಾಲೆತ್ತಾಡಿ ಅವರದು ಕ್ರಿಯಾಶೀಲ ವ್ಯಕ್ತಿತ್ವ. ●

## ಬೆಂಗಳೂರು ಗ್ರಾಮಾಂತರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು

## ಗಾಂಧಿಚೌಕ, ವಿಜಯಪುರ, ದೇವನಹಳ್ಳಿ ತಾಲ್ಲೂಕು

**ಬೆಂಗಳೂರು ಗ್ರಾಮಾಂತರ ಜಿಲ್ಲೆ– 532135**

ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದ 60 ಸಾಹಿತಿಗಳ ಕೃತಿಗಳನ್ನು ಬಿಡುಗಡೆ ಮಾಡುವ ಕಾರ್ಯಕ್ರಮ, ಇಡೀ ಜಿಲ್ಲೆಯಾದ್ಯಂತ ವಿಚಾರ ಸಂಕೀರ್ಣಗಳು, ರಾಜ್ಯದ ಎಲ್ಲಾ ತಾಲ್ಲೂಕುಗಳಿಂದ ಕವನಗಳನ್ನು ಸಂಗ್ರಹ ಮಾಡಿ ಕವನ ಸಂಕಲನ ಬಿಡುಗಡೆ ಹಾಗೂ ದೇಶದ ನಾನಾ ಭಾಗಗಳಲ್ಲಿ ವಾಸಿಸುತ್ತಿರುವ ಅಂದರೆ ಪ್ರಮುಖವಾಗಿ ದೆಹಲಿ, ಪೂನಾ, ಮದ್ರಾಸ್, ಕಾಸರಗೋಡು, ಆದೋನಿ, ಗೋವಾ, ರಲ್ಲಿನ ಕನ್ನಡಿಗರಿಂದ ಕವನಗಳನ್ನು ಸಂಗ್ರಹ ಮಾಡಿ ಆಯಾ ರಾಜ್ಯದ ಕನ್ನಡಿಗರ ಹೆಸರಿನಲ್ಲಿ ಕವನ ಸಂಕಲನದ ತರಲಾಗುವುದು (ಉದಾ: ದೆಹಲಿ ಕನ್ನಡಿಗರ ಕವನ ಸಂಕಲನ, ಕಾಸರಗೋಡು ಕನ್ನಡಿಗರ ಕವನ ಸಂಕಲನ)

ಆದ್ದರಿಂದ ಮಾನ್ಯರಾದ ತಾವುಗಳು ನವೆಂಬರ್ 30ರೊಳಗಾಗಿ ಕವನಗಳನ್ನು ಕಳುಹಿಸಿಕೊಡಬೇಕಾಗಿ ಈ ಮೂಲಕ ಕೋರಲಾಗಿದೆ.

ಅಧ್ಯಕ್ಷರು
ಚಿ.ಮಾ.ಸುಧಾಕರ
ಕನ್ನಡ ಸಾಹಿತ್ಯ ಪರಿಷತ್ತು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು

# ಕರ್ನಾಟಕ ಸಂಗೀತ ಕ್ಷೇತ್ರದ ನಾಡ ಕಣ್ಮಣಿಗಳು
## ವಿದ್ವಾನ್ ಪಿಟೀಲು ಚೌಡಯ್ಯ (ಪಿಟೀಲು ವಿದ್ವಾಂಸರು)

ಮೈಸೂರು ಸಮೀಪದಲ್ಲಿ ತಿರುಮಕೂಡಲು ಎಂಬ ಕ್ಷೇತ್ರವಿದೆ. ಈ ಕ್ಷೇತ್ರದಲ್ಲಿ ದೊಡ್ಡ ಆಗಸ್ತ್ಯೇಗೌಡರು ಮತ್ತು ಧರ್ಮಪತ್ನಿ ಸುಂದರಮ್ಮನವರ ವಾಸ. ಅಪರೂಪ ದಂಪತಿಗಳು ಊರಿನಲ್ಲಿ ಇದ್ದ ಬ್ರಾಹ್ಮಣ ಪಂಡಿತರಿಗೆ, ವಿದ್ವಾಂಸರಿಗೆ ಇವರಲ್ಲಿ ಭಕ್ತಿಪೂರ್ವಕ ಆದರಾತಿಥ್ಯಗಳು ನಡೆಯುತ್ತಿದ್ದವು. ರೈತಾಪಿ ಜನಾಂಗವಾದರೂ ಸಂಗೀತ, ಸಾಹಿತ್ಯ, ಸಂಸ್ಕೃತಿಗಳ ಬಗ್ಗೆ ಅಪಾರ ಗೌರವವನ್ನು ಇಟ್ಟುಕೊಂಡಿದ್ದ ದಾನಶೂರಕರ್ಣರು.

ಇವರೀರ್ವರ ಸುಪುತ್ರರೇ ಚೌಡಯ್ಯನವರು. 1894ನೇ ಇಸವಿ ಜನವರಿ ತಿಂಗಳ ಮೊದಲದಿನವೇ ಇವರ ಜನನ. ಬಹುಶಃ ಅದರಿಂದಲೇ ಸಂಗೀತ ಕ್ಷೇತ್ರದಲ್ಲೂ ಮೊದಲಿಗರಾಗೇ ಹೆಸರು ಗಳಿಸಿದರು. ಗುಂಡಾಚಾರ್ಯರೆಂಬ ಸಂಸ್ಕೃತ ವಿದ್ವಾಂಸರು ಚೌಡಯ್ಯನವರಿಗೆ ಅಮರ, ರಘುವಂಶ ಮುಂತಾದ ಪಾಠ ಹೇಳಿದರೂ ಅವರ ಮನಸ್ಸು ಇವೆಲ್ಲದರಿಂದ ವಿಮುಖವಾಗಿ ಸಂಗೀತದತ್ತ ವಾಲಿತು. ಇವರ ಸಂಗೀತದ ಓಂಕಾರಕ್ಕೆ ಅಂಕಿತ ಹಾಕಿದವರು ಸೋಸಲೆ ಮಠದ ಹಿರಿಯ ವಿದ್ವಾಂಸರಾದ ವಿದ್ಯಾ ಕಾಂತಾಚಾರ್ಯರು. ಇವರ ಜಾತಕವನ್ನು ವೀಕ್ಷಿಸಿದ ಅವರು ಇವರೊಬ್ಬ ಖ್ಯಾತಿವಂತರಾದ ವಿದ್ಯಾ ಕಲಾವಿದರಾಗುತ್ತಾರೆಂದು ಭವಿಷ್ಯ ನುಡಿದು ಇವರಿಗೆ ಸಂಗೀತ ಪಾಠ ಮಾಡಿಸಲು ಇವರ ತಂದೆಯವರಿಗೆ ಆದೇಶವಿತ್ತರು. ಆದರೆ, ಹಿಂದುಳಿದ ಪ್ರದೇಶದಲ್ಲಿ ಆಘನ ಪಂಡಿತರ ಅಭಾವ. ಹೀಗಾಗಿ ಅವರ ಸೋದರ ಸಂಬಂಧಿ ಪಕ್ಕಣ್ಣನವರಿಂದ ಪಿಟೀಲು ಪಾಠಕ್ರಮ ಪ್ರಾರಂಭ. ಆದರೆ ಇದು ಹೆಚ್ಚು ದಿನ ಸಾಗಲಿಲ್ಲ. ನಂತರ ತಿರುಮಕೂಡಲು ಸುಬ್ಬಣ್ಣ. ರಾಮಣ್ಣನವರಲ್ಲಿ ಸಾಗಿದರೂ ಮುಂದುವರಿಯಲಿಲ್ಲ.

ಮುಂದೊಂದು ದಿನ ತಂದೆಯವರು ಮೈಸೂರಿನಲ್ಲಿ ಬಿಡಾರ ಹೂಡಲು ನಿರ್ಧರಿಸಿದರು. ಈ ಬದಲಾವಣೆ ಚೌಡಯ್ಯನವರ ಸಾಧನೆಗೊಂದು ತಿರುವು ನೀಡಿತು. ಅಲ್ಲಿ ಬಿಡಾರಂ ಕೃಷ್ಣಪ್ಪನವರಂಥಹ ಉದ್ಧಾಮ ವಿದ್ವಾಂಸರು ಇವರ ಗುರುಗಳಾಗಿ ದೊರೆತುದು ಇವರ ಪೂರ್ವಜನ್ಮದ ಸುಕೃತ. ಅಮವಾಸ್ಸೆ ಹಾಗೂ ಆಷಾಢಮಾಸ ಇವೆರಡೂ ಶುಭ ಕಾರ್ಯಕ್ಕೆ ಒಳಿತಲ್ಲ ಎಂಬ ಭಾವನೆಯಿದೆ. ಆದರೆ ಶ್ರೀಯುತರ ಸಾಧನೆ ಪ್ರಾರಂಭವಾದುದೇ ಅಂದು. 1910 ರ ಆಷಾಢಮಾಸದ, ತುಂಬು ಅಮಾವಾಸ್ಸೆಯ ದಿನ ಆರಂಭವಾದ ಅವರ ಜೀವದ ಉಸಿರಾಯಿತು. ಗುರುಗಳಾದರೂ ಇವರ ಏಕಾಗ್ರತೆಯನ್ನು ಗಮನಿಸುತ್ತಿದ್ದರು ಹಾಗೂ ಅವರಿಗೆ ಶಿಷ್ಯನಲ್ಲಿ ಅಪಾರ ವಿಶ್ವಾಸ ಮೂಡಿಸಿತ್ತು. ಪ್ರಾರಂಭದ ಕಛೇರಿ ಗುರುವಿನ ಗಾಯನಕ್ಕೆ ಶಿಷ್ಯನ ಪಕ್ಕವಾದ್ಯ. ಇದೊಂದು ಇವರ ಜೀವಮಾನದಲ್ಲಿ ಮರೆಯಲಾಗ್ದ ಅನುಭವ. ಅದರೆ ಎಲ್ಲೋ ಒಂದು ಕಡೆ ಸ್ವಲ್ಪ ಅಪಶ್ರುತಿ ಮಿಡಿದಾಗ ಗುರುಗಳು ವೇದಿಕೆಯ ಮೇಲೆ ಶಿಷ್ಯನಿಗೆ ಕೆನ್ನೆಗೆ ಬಾರಿಸಿದರು. ಇದರಿಂದ ಬೇಸರಿಸದ ಶಿಷ್ಯನಾದರೂ ಅದನ್ನು ಭಯ ಭಕ್ತಿಗಳಿಂದ ಸ್ವೀಕರಿಸಿದ ದಾರ್ಶನಿಕ ವ್ಯಕ್ತಿ ಚೌಡಯ್ಯನವರು.

ಮೈಸೂರಿನಿಂದ ಪ್ರಾರಂಭವಾದ ಕಾರ್ಯಕ್ರಮ ಕರ್ನಾಟಕ ದಾಟಿ ತಮಿಳುನಾಡು ಪ್ರವೇಶ ಪಡೆದು ಆಂಧ್ರದಲ್ಲಿ ಅಭಿಮಾನ ಗಳಿಸಿ, ಇಡೀ ದೇಶ ವ್ಯಾಪಿಸಿತು. ಚೌಡಯ್ಯನವರ ಸಾಧನೆ ಅಪರಿಮಿತ ಸಾಧನೆ. ಮುಂದೆ ವಾಸುದೇವಾಚಾರ್ಯ, ಚಂಬೈ, ಅರಿಯಾಕುಡಿ ರಾಮಾನುಜಾ ಅಯಂಗಾರ್, ಜಿ.ಎನ್.ಬಿ, ಆಲತ್ತೂರು ಸಹೋದರರು, ಟೈಗರ್ ವರದಾಚಾರ್, ಮಧುರೆ ಮಣಿ ಅಯ್ಯರ್, ಮಹಾರಾಜಪುರಂ ಸಂತಾನಂ, ಮುಸುರಿ ಹೀಗೆ ಸಂಗೀತ ದಿಗ್ಗಜರಿಗೆಲ್ಲಾ ಚೌಡಯ್ಯ ್ನವರ ಸಾಥಿಯೇ ಅವಶ್ಯವಾಯಿತು. ಕಾರ್ಯಕ್ರಮವನ್ನು ಒಪ್ಪಿಕೊಳ್ಳಬೇಕಾದರೆ ಚೌಡಯ್ಯನವರ ದಿನಾಂಕವನ್ನು ಕೇಳುವಂತಾಯಿತು ಇವರ ಖ್ಯಾತಿ.

ಸಂಗೀತದಲ್ಲಿ ಅಪೂರ್ವ ಸಾಧನೆ ಗಳಿಸಿದ್ದರೂ ಸಣ್ಣ ಮಗುವಿನಂಥ



ನಿಷ್ಕಲ್ಮಶ ಮನಸ್ಸು. ಒಳ್ಳೆಯ ಸಂಗೀತ ಕೇಳಿದರೆ ಅವರು ಸಣ್ಣವರೇ ಆದರೂ ಅಭಿನಂದಿಸುವ ಹೃದಯ ವೈಶಾಲ್ಯತೆ ಇವರಲ್ಲಿತ್ತು. ನಾಲ್ಕು ತಂತಿಯಿಂದ ಏಳು ತಂತಿಗೇರಿದ ಇವರ ನಾದವೂ ಅಷ್ಟೇ ಗಂಭೀರವಾಗಿತ್ತು. ಇವರದೊಂದು ಬಹುಮುಖ ಪ್ರತಿಭೆ. ಸಾಹಿತ್ಯ, ಸಂಶೋಧನೆ, ಸಿನಿಮಾ ಹೀಗೆಯೇ ಸಾಗಿ ವಾಗ್ಗೇಯಕಾರರೂ ಆಗಿದ್ದಾರೆ. ಸಂಗೀತದ ಮೇಲಿನಷ್ಟೇ ಹುಚ್ಚು ಮಾತುಗಾರಿಕೆಯಲ್ಲೂ ಇತ್ತು. ಇವರ ಸಂಗೀತ ಸೌರಭದಿಂದ ಆಕರ್ಷಿತರಾದ ಕಲಾಬಂಧುಗಳು ಅಪೇಕ್ಷೆಯಿಲ್ಲದಿದ್ದರೂ ಇವರ ಭಾಷಣದ ಸವಿಯನ್ನು ಸವಿದಿದ್ದರು. 1967 ರ ಜನವರಿ ತಿಂಗಳ ದಿನಾಂಕ 19 ರಂದು ಅನಾರೋಗ್ಯ ಪೀಡಿತರಾಗಿ ಮೈಸೂರಿನ ಕೃಷ್ಣರಾಜ ಆಸ್ಪತ್ರೆಯಲ್ಲಿ ತಮ್ಮ ಜೀವನದ ಮಂಗಳ ಹಾಡಿ ಚಿರ ಶಾಂತಿ ಬಯಸಿದರು.

## MATRIMONIAL

Alliance invited for a Smartha Kannada Brahmin, hoysala Karnataka Girl, 24th April 1993 Born, 5ft 7 Inches, Bhardwaj Gotra, Rohini Nakshatra. M.A in Clinical Psychology working in a clinic in Mumbai. Alliance Preference for a Smartha Brahmin Boy settled in Mumbai.
Contact: ) 9730045097 email: umeshsb1965@gmail.com

***

Wanted Kannada Speaking Brahmin Boy, working abroad. Girl Age: 24 Yes (1991 Born) Education: B.Tech, MBA Height: 5'4" , slim, fair, good looking. Gotra: Bharadwaja, Star: Chitta (Father Defence Officer).
Contact:9444542814/9867244123
email : ramavi18b@gmail.com

***

Alliance invited for a Madhva Bramhin boy Age 31 years, Bharadwaja Gotra, Moola - 4th Pada, Dhanur Rashi, Height – 5'11", fair complexion. BE, MBA, MS (FIN) Chicago, working for a MNC Bank in Mumbai. Girl wanted with service in Mumbai

# ನೇಸರು 'ಜಾಗತಿಕ ಮಾಸ್ತಿ ಸ್ಮರಣಾರ್ಥ ಸಣ್ಣ ಕತೆ ಸ್ಪರ್ಧೆ – 2016'ರ ವಿಜೇತರರು

**ಪ್ರಥಮ ಬಹುಮಾನ ರೂ. 10,000/-**
**ಕಥೆ : 'ಗೋಪಿಯ ಅಜ್ಜಿ'**



ವಿನಾಯಕ ಅರಳಸುರಳಿ, ಶಿವಮೊಗ್ಗ

**ದ್ವಿತೀಯ ಬಹುಮಾನ ರೂ. 5,000/-**
**ಕಥೆ : 'ಹಗಲೂ ರಾತ್ರಿ ದನ ಕಾಯುವವನು'**



ಹುಳಗೋಳ ನಾಗಪತಿ ಹೆಗಡೆ, ಅಂಕೋಲಾ

**ತೃತೀಯ ಬಹುಮಾನ ರೂ. 3,000/-**
**ಕಥೆ : 'ಸಾಂಗತ್ಯ'**



ಕುಮಾರ್ ವಿಜಯ್, ಬೆಂಗಳೂರು

**ಪ್ರೋತ್ಸಾಹಕರ ಬಹುಮಾನ ರೂ. 1,000/-**
**ಕಥೆ : 'ಬಿಟ್ಟೆನೆಂದರೂ....'**



◀ ಎ.ಎಸ್. ಗೀತಾ ಕುಬೇರಪ್ಪ
ಶಿವಮೊಗ್ಗ

**ದ್ವಿತೀಯ ಬಹುಮಾನ ರೂ. 1,000/-**
**ಕಥೆ : 'ಭೂತ'**



▶ ಡಾ. ಬಿ. ಜನಾರ್ದನ್ ಭಟ್
ಉಡುಪಿ







*A talk on a Book on Life and Preaching of Shree Shirdi Saibaba, Written by Sri. C.S.Dinesh(Our Life member) at Chembur Saraswati Vidyalaya on 13th October, 2016*

Date of Publication : 10th of every month RNI No. 040015 / 83
Regd. No. MNE / 93 / 2015-17 Date of Posting:10/11th of every month
at Mumbai Patrika Channel Sorting Office G.P.O.

# ಮುಂಬರುವ ಕಾರ್ಯಕ್ರಮಗಳು

**ನವೆಂಬರ್ 20, 2016** ಭಾನುವಾರ ರಾಜ್ಯೋತ್ಸವ ಮತ್ತು ಕನಕ ಜಯಂತಿ ಆಚರಣೆ –
ಸಂಗೀತ ಕಾರ್ಯಕ್ರಮ ಶ್ಯಾಮಲಾ ಪ್ರಕಾಶ್ ಮತ್ತು ಸಂಗಡಿಗರಿಂದ

**ಡಿಸೆಂಬರ್ 2, 2016** ಶುಕ್ರವಾರ ದಿಂದ ಡಿಸೆಂಬರ್ 6, 2016 ಮಂಗಳವಾರ
**KSIC Silk Saree Exhibition & Sale**

**ಡಿಸೆಂಬರ್ 10, 2016** ಶನಿವಾರ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ:
ಕು. ಸಂಜನಾ ಕೌಶಿಕ್, ಮೈಸೂರು

ಸಂಗೀತ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ.

**ಡಿಸೆಂಬರ್ 11, 2016** ಭಾನುವಾರ ಹಿಂದೂಸ್ತಾನಿ ಸಂಗೀತ ಕಾರ್ಯಕ್ರಮ:
ಶ್ರೀ ವಿಶ್ವೇಶ್ ಭಟ್ – "ಸ್ವರಾಮೃತ",

(ಪ್ರಾಯೋಜಕರು: ಇನ್‌ಫೋಸಿಸ್ ಫೌಂಡೇಶನ್ ಬೆಂಗಳೂರು)

ಮತ್ತು

ಮಾಸ್ತಿ ಸ್ಮರಣಾರ್ಥ ಜಾಗತಿಕ ಕಥಾ ಸ್ಪರ್ಧೆಯ ವಿಜೇತರಿಗೆ ಮತ್ತು
ರಂಗೋಲಿ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣಾ ಸಮಾರಂಭ

**ಡಿಸೆಂಬರ್ 25, 2016 ಭಾನುವಾರ**

ಕನ್ನಡದ ತಾರಾಜಗತ್ತಿನ ಕಣ್ಮಣಿಗಳಾದ ಜಯಂತಿ, ಭಾರತಿ, ಆರತಿ, ಬಿ. ಸರೋಜಾ ದೇವಿ, ಗಿರಿಜಾ ಲೋಕೇಶ್, ಸುಂದರರಾಜ್, ಇವರುಗಳು ಹಿರಿಯ ನಾಟಕಕಾರರು ಡಾ. ವಿಜಯಾ ಅವರನ್ನು ಅದ್ದೂರಿಯಾಗಿ ನಮ್ಮ ಅಸೋಸಿಯೇಷನ್ನಿನಲ್ಲಿ ಸನ್ಮಾನ ಮಾಡಲಿದ್ದಾರೆ. ಕಾರ್ಯಕ್ರಮದ ವಿವರಗಳನ್ನು ಡಿಸೆಂಬರ್ 23, 2016ರ ಕರ್ನಾಟಕಮಲ್ಲ ಮತ್ತು ಉದಯವಾಣಿ ಪತ್ರಿಕೆಯಲ್ಲಿ ಪ್ರಕಟಿಸಲಿದ್ದೇವೆ.

**ಜನವರಿ 20, 21, 22, 2017** ಶ್ರೀರಂಗರ ನಾಟಕೋತ್ಸವದ ಅಂಗವಾಗಿ ಹಿಂದಿ, ಮರಾಠಿ
ಹಾಗೂ ಕನ್ನಡ ನಾಟಕ ಪ್ರದರ್ಶನ

Edited, Printed & Published by Mrs. Girija Shastry, On behalf of the Mysore Association, Mumbai. Tel.: 2402 4647 • Fax : 2401 0574
Email : mysoreassociation.mumbai@gmail.com
Printed at Aarati Art Printers, Fort, Mumbai - 400 001. * 2266 3361 / 2266 5938